ಖಾಸಗಿ ಪ್ರಸಾರ



# ಶ್ರೀದೇವಿ ಅಂತರಂಗ

ಸೇವೆ - ಶಿಕ್ಷಣ - ಅಧ್ಯಾತ್ಮದ ಜೊತೆಗೆ ಪಯಣ

ಮಾಸಪತ್ರಿಕೆ
ಸಂಪುಟ 2, ಸಂಚಿಕೆ 3
ಜನವರಿ 2023

SHRIDEVI ANTARANGA
Monthly Magazine




SHRIDEVI
EDUCATION



ಪ್ರಧಾನ
ಸಂಪಾದಕರ
ಅಂತರಂಗ

ಚಿಜಿಚಿಜಿ

ಡಾ. ಎಂ.ಆರ್. ಹುಲಿನಾಯ್ಕರ್
ಸಂಸ್ಥಾಪಕ ಅಧ್ಯಕ್ಷರು
ಶ್ರೀದೇವಿ ಶಿಕ್ಷಣ ಸಂಸ್ಥೆಗಳ ಸಮೂಹ

## ರಾಜ್ಯದ ಜನತೆಗೆ ಕಾಯಕಯೋಗಿಯ ಆಶೀರ್ವಾದ ದೊರೆಯಲಿ

2023ರ ಜನವರಿ 19ರಂದು ಕರ್ನಾಟಕ ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತ್ರತ್ವದಲ್ಲಿ ನಡೆದ ಸಚಿವ ಸಂಪುಟ ಸಭೆ ಮಹತ್ವದ ನಿರ್ಣಯವೊಂದನ್ನು ತೆಗೆದುಕೊಂಡಿದೆ. 12ನೆಯ ಶತಮಾನದ 'ಮಹಾನ್ ಜ್ಯೋತಿ' ಎಂದೇ ಪರಿಗಣಿತವಾಗಿರುವ ಭಕ್ತಿಭಂಡಾರಿ ಪರಮ ಪೂಜ್ಯ ಶ್ರೀ ಬಸವಣ್ಣ ಅವರನ್ನು 'ಕರ್ನಾಟಕ ರಾಜ್ಯದ ಸಾಂಸ್ಕೃತಿಕ ನಾಯಕ' ಎಂದು ತೀರ್ಮಾನಿಸಿ, ಅದನ್ನು ಸರ್ಕಾರ ಘೋಷಿಸಿದೆ. ಮಹಾರಾಷ್ಟ್ರ, ತಮಿಳುನಾಡು ಮತ್ತು ಕೇರಳರಾಜ್ಯಗಳಲ್ಲಿ ಜನತೆ ತಮ್ಮ ಸಾಂಸ್ಕೃತಿಕ ನಾಯಕರನ್ನು ಆಯ್ಕೆ ಮಾಡಿಕೊಂಡಿದ್ದಾರೆ.




ಕೆಲವು ಲಿಂಗಾಯಿತ ಮಠಾಧೀಶರು ಬಸವಣ್ಣ ಅವರನ್ನು ಸಾಂಸ್ಕೃತಿಕ ನಾಯಕ ಎಂದು ಘೋಷಿಸುವಂತೆ ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಕೊಟ್ಟಿದ್ದರು. ಅದರಂತೆ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಕೆಲವು ಮಾಧ್ಯಮಗಳು ವರದಿ ಮಾಡಿದ್ದವು. ನಾನು ಕಳೆದ ನಾಲ್ಕು ದಶಕಗಳಿಂದಲೂ ಶ್ರೀ ಸಿದ್ದರಾಮಯ್ಯ ಅವರನ್ನು ನೋಡುತ್ತಾ ಬಂದಿದ್ದೇನೆ. ಅವರ ಚಿಂತನೆ ಮತ್ತು ಕಾರ್ಯಗಳಲ್ಲಿ ವೈರುಧ್ಯವಿಲ್ಲ. ಕಾಲೇಜು ದಿನಗಳಲ್ಲಿ ರೂಢಿಸಿಕೊಂಡ ಆದರ್ಶಗಳನ್ನು ಇಂದಿಗೂ ನಂಬಿ ಅದರಂತೆ ನಡೆದುಕೊಂಡು ಬರುತ್ತಿದ್ದಾರೆ. ಸಾಮಾಜಿಕ ಬದ್ಧತೆಯೊಡನೆ ಶೋಷಿತ ಸಮಾಜದ ಏಳಿಗೆಯಾಗಬೇಕು ಎನ್ನುವುದು ಅವರ ವ್ಯಕ್ತಿತ್ವದ ಭಾಗವಾಗಿದೆ. ಈ ಹಿನ್ನೆಲೆಯಲ್ಲಿ ಬಸವಣ್ಣ ಅವರಿಗೆ ಆದರ್ಶವೂ ಹೌದು, ಮಾರ್ಗದರ್ಶಕನೂ ಹೌದು. ಸಚಿವ ಸಂಪುಟದ ನಿರ್ಣಯವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಸವತತ್ವದ ಮೇಲಿನ ಪ್ರೀತಿ ಮತ್ತು ಸಾಮಾಜಿಕನ್ಯಾಯದ ಮೇಲಿನ ಬದ್ಧತೆಯಿಂದ ಮಾಡಿದ್ದಾರೆ ಎಂದು ಭಾವಿಸಲು ಯಾವುದೇ ಸಂಶಯವಿಲ್ಲ. ಈ ಮಹತ್ವದ ನಿರ್ಣಯಕ್ಕಾಗಿ ಮುಖ್ಯಮಂತ್ರಿಗಳಿಗೂ ಮತ್ತು ಅವರ ಸಚಿವ ಸಂಪುಟದ ಸದಸ್ಯರಿಗೆ ಹಾರ್ದಿಕ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ನಾವೆಲ್ಲಾ ಬಸವಣ್ಣನವರು ಹುಟ್ಟಿ ಬೆಳೆದ ಪರಿಸರದಿಂದ ಬಂದವರು. ನಮ್ಮ ಭಾಗದಲ್ಲಿ ಬಸವಣ್ಣನವರು ಮಾತ್ರವಲ್ಲ ಅನೇಕ ಶಿವಶರಣರು ಆಗಿ ಹೋಗಿದ್ದಾರೆ. ಅವರು ಕಳೆದ ಅಂತಿಮ ದಿನಗಳ ಸ್ಥಳವು ಇಂದು ಪೂಜಾ ಸ್ಥಳವಾಗಿದೆ. ಉದಾಹರಣೆಗೆ ಹೇಳುವುದಾದರೆ ವಿಜಯಪುರ ಜಿಲ್ಲೆಯ ದೇವರಹಿಪ್ಪರಗಿಯಲ್ಲಿ ಮಡಿವಾಳದ ಮಾಚಿದೇವರು ಲಿಂಗೈಕ್ಯರಾಗಿದ್ದಾರೆ. ಮಲಪ್ರಭಾದ ದಂಡೆಯ ಮೇಲಿರುವ ಮುಗಟಖಾನ್ ಹುಬ್ಬಳ್ಳಿಯಲ್ಲಿ ಬಸವಣ್ಣನವರ ಪತ್ನಿ ಗಂಗಾಂಬಿಕೆ ಲಿಂಗೈಕ್ಯರಾಗಿದ್ದಾರೆ. ಬಸವಣ್ಣ ಅವರ ಮತ್ತೊಬ್ಬ ಪತ್ನಿ ನೀಲಾಂಬಿಕೆ ಕೂಡಲಸಂಗಮದ ಬಳಿ ಹರಿಯುವ ಕೃಷ್ಣಾನದಿಯ ಎಡದಂಡೆಯ ಬಳಿ ಐಕ್ಯರಾಗಿದ್ದಾರೆ. ಸ್ವತಃ ಬಸವಣ್ಣ ಅವರು ಕೂಡಲಸಂಗಮದಲ್ಲಿ ಐಕ್ಯರಾಗಿದ್ದಾರೆ. ಸಾವಿರಾರು ಶರಣರು ನಮ್ಮ ಕಿತ್ತೂರು ಕರ್ನಾಟಕದ ಭಾಗದಿಂದ ಬಂದು ಈ ನಾಡಿನ ಸಾಂಸ್ಕೃತಿಕ ಪರಂಪರೆಗೆ ಅಮೂಲ್ಯವಾದ ಕಾಣಿಕೆ ನೀಡಿದ್ದಾರೆ. ಅವರ ಪ್ರಭಾವ ನಿರಂತರವಾಗಿ ಮುಂದುವರಿದಿದೆ.

ಸಾವಿರಾರು ವರ್ಷಗಳ ಗುಲಾಮಗಿರಿಯಲ್ಲಿದ್ದು ಆತ್ಮವಿಶ್ವಾಸವನ್ನೇ ಕಳೆದುಕೊಳ್ಳುತ್ತಿದ್ದ ಶ್ರೀಸಾಮಾನ್ಯರಿಗೆ ವಚನಕಾರರ ಪರಂಪರೆಯನ್ನು ಮುಂದುವರಿಸಿದ ಆಧುನಿಕಯುಗದ ಶರಣರು ಮಾರ್ಗದರ್ಶಕರಾಗಿ ಅವರ ಜೊತೆಯಲ್ಲಿದ್ದಾರೆ. ಅವರಿಗೆ ಜಾತಿ, ಮತ ಭೇದವಿರಲಿಲ್ಲ. ಅಂತಹ ಶರಣರಲ್ಲಿ ನಾನು ವಿದ್ಯಾರ್ಥಿ ಜೀವನದಲ್ಲಿ ಕಂಡಿದ್ದ ಗಾಮನಗಟ್ಟಿ ಶ್ರೀಬಸವದೇವರು ಅತ್ಯಂತ ಪ್ರಮುಖರು. ಶ್ರಾವಣಮಾಸದ ಕಾಲದಲ್ಲಿ ಒಂದು ತಿಂಗಳು ನನ್ನೂರು ನವಲಗುಂದ ತಾಲ್ಲೂಕಿನ ತುಪ್ಪದಕುರಹಟ್ಟಿಯಲ್ಲಿ ಅವರ ಪ್ರವಚನ ನಡೆಯುತ್ತಿತ್ತು. ಆಗ ನಾನು ಮಿಡಲ್‌ಸ್ಕೂಲ್‌ನ ವಿದ್ಯಾರ್ಥಿ. ಅವರ ಪ್ರವಚನಕ್ಕೆ ಗ್ರಾಮದ ಎಲ್ಲ ಜನರು ಬರುವುದಲ್ಲದೆ ಪರಿಶಿಷ್ಟ ಜಾತಿಯ ಜನರು ಯಥೇಚ್ಛ ಸಂಖ್ಯೆಯಲ್ಲಿ ಆಗಮಿಸುತ್ತಿದ್ದರು. ವಿದ್ಯಾರ್ಥಿ ದೆಸೆಯಲ್ಲಿ ನನ್ನನ್ನು ನೋಡಿದ ಅವರು ನಮ್ಮ ತಂದೆಗೆ "ಈ ಹುಡುಗ ಓದಿನಲ್ಲಿ ಬುದ್ಧಿವಂತನಿದ್ದಾನೆ, ಅವನು ಎಷ್ಟರ ತನಕ ಓದಿದರೂ ಓದಿಸಿ. ವ್ಯವಸಾಯದ ಕೆಲಸಕ್ಕೆ ಅವನನ್ನು ಹಚ್ಚಬೇಡಿ" ಎಂದಿದ್ದರು.

▶▶ 2ನೇ ಪುಟಕ್ಕೆ...

## ಗೃಹ ಸಚಿವರ ಸಂದೇಶ



'ಶ್ರೀದೇವಿ ಅಂತರಂಗ' ಮಾಸಪತ್ರಿಕೆಯ ಪ್ರಧಾನ ಸಂಪಾದಕರಾದ ಡಾ.ಎಂಆರ್.ಹುಲಿನಾಯ್ಕರ್ ಅವರು ತಮ್ಮ ಕಾಲಂನಲ್ಲಿ ಇತ್ತೀಚಿಗೆ ನಡೆದ ಐದು ವಿಧಾನಸಭಾ ಚುನಾವಣೆಗಳ ಬಗ್ಗೆ ವಿಶ್ಲೇಷಣೆ ಮಾಡಿದ್ದರು. ಈ ವಿಶ್ಲೇಷಣೆಯ ಇಂಗ್ಲಿಷ್ ಅನುವಾದವನ್ನು ಭಾರತ ಸರ್ಕಾರದ ಮಾನ್ಯ ಗೃಹ ಮತ್ತು ಸಹಕಾರ ಸಚಿವರಾದ ಶ್ರೀ ಅಮಿತ್ ಶಾ ಅವರಿಗೆ ಕಳುಹಿಸಲಾಗಿತ್ತು. ಅದಕ್ಕೆ ಅವರು ತಮ್ಮ ಸಂತೋಷ ಮತ್ತು ಅಭಿನಂದನೆಯನ್ನು ದಿನಾಂಕ.31.12.2023ರಂದು ಬರೆದ ಪತ್ರದಲ್ಲಿ ತಿಳಿಸಿರುತ್ತಾರೆ. ಶ್ರೀಯುತರ ಹಿಂದಿಪತ್ರವನ್ನು ಕನ್ನಡಭಾಷೆಗೆ ಹಿಂದಿ ಭಾಷೆಯಿಂದ ನೂರಕ್ಕೂ ಹೆಚ್ಚಿನ ಗ್ರಂಥಗಳನ್ನು ಅನುವಾದ ಮಾಡಿರುವ ಚಿಕ್ಕನಾಯಕನಹಳ್ಳಿಯ ಶ್ರೀಎಂ.ವಿ.ನಾಗರಾಜರಾವ್ ಅವರು ಮಾಡಿದ್ದಾರೆ. ಅವರಿಗೆ ಕೃತಜ್ಞತೆಗಳು. ಆ ಪತ್ರದ ವಿವರ

**ಅಮಿತ್ ಶಾ**
**ಭಾರತ ಸರ್ಕಾರದ**
**ದಿನಾಂಕ 31.12.2023**
**ಗೃಹ ಮತ್ತು ಸಹಕಾರ ಸಚಿವರು**
**ಗೃಹ ಸಚಿವಾಲಯ ನಾರ್ತ್ ಬ್ಲಾಕ್**
**ನವದೆಹಲಿ**

**ಮಾನ್ಯ ಡಾ.ಹುಲಿನಾಯ್ಕರ್ ಅವರೇ,**

ಇತ್ತೀಚಿಗಷ್ಟೇ ಸಂಪನ್ನವಾದ ಐದು ವಿಧಾನಸಭಾ ಚುನಾವಣೆಯಲ್ಲಿ ಭಾರತೀಯ ಜನತಾ ಪಾರ್ಟಿಯ ಸಫಲತೆಯವಿಷಯದಲ್ಲಿತಾವುಕಳುಹಿಸಿದಅಭಿನಂದನೆಯಸಂದೇಶತಲುಪಿಸಂತೋಷವಾಗಿದೆ.ರಾಜಸ್ಥಾನ, ಮಧ್ಯಪ್ರದೇಶ ಮತ್ತು ಛತೀಸ್‌ಗಡದಲ್ಲಿ ಭಾರತೀಯ ಜನತಾ ಪಾರ್ಟಿ ಸಾಧಿಸಿದ ವಿಜಯ ಪ್ರತಿಯಬ್ಬ ಕಾರ್ಯಕರ್ತನ ಗೆಲುವು ಆಗಿದೆ. ಅವರು 'ಒಂದು ಭಾರತ ಶ್ರೇಷ್ಠ ಭಾರತ'ವನ್ನು ಸಾಕಾರಗೊಳಿಸಲು ತನು, ಮನ, ಧನದಿಂದ ಶ್ರಮಿಸಿದ್ದಾರೆ.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಭಾರತೀಯ ಜನತಾಪಾರ್ಟಿಯು ಸಾಧಿಸಿದ ಗೆಲುವು ದೇಶದ ಜನರಲ್ಲಿ ಮಾನನೀಯ ಪ್ರಧಾನಮಂತ್ರಿ ಶ್ರೀನರೇಂದ್ರ ಮೋದಿಜಿ ಅವರ ನೀತಿ, ವಿಷಯದಲ್ಲಿ ಮತದಾರರು ಇಟ್ಟುಕೊಂಡಿರುವ ನಂಬಿಕೆಯ ಸಂಕೇತವಾಗಿದೆ.

ಜನರ ಕಲ್ಯಾಣಕಾರಿ ನೀತಿಗಳಲ್ಲಿ ದೃಢಸಫಲತೆಯಿಂದ ಜನರ ಮನಸ್ಸಿನಲ್ಲಿ ಮತ್ತು ದೇಶದಲ್ಲಿ ದೂರಗಾಮಿ ಪರಿವರ್ತನೆ, ಶಾಂತಿ ಹಾಗೂ ಸುರಕ್ಷತೆಯು ಜನತೆಯ ಸಹಕಾರದಿಂದ ಸುರಕ್ಷಿತವಾಗಿರುತ್ತದೆ ಎಂಬ ಭಾವನೆ ದೃಢವಾಗಿಸಿದೆ.

ನಿಮ್ಮ ಸ್ನೇಹ, ವಿಶ್ವಾಸ ಮತ್ತು ಸದಾಶಯಗಳ ಭಾವನೆ ನಮ್ಮ ಜವಾಬ್ದಾರಿ ನಿರ್ವಹಣೆಯ ದಿಕ್ಕಿನಲ್ಲಿ ನಮ್ಮ ಶಕ್ತಿಯ ಕೇಂದ್ರವಾಗಿದೆ.

ಹೃದಯಕ್ಕೆ ಆಸ್ವಾದ ಪ್ರಧಾನ ಮಾಡುವ ನಿಮ್ಮ ಶಬ್ದಗಳಿಗೆ ನಾನು ಅಭಾರಿಯಾಗಿದ್ದೇನೆ.

**ವಿಶ್ವಾಸಪೂರ್ವಕವಾಗಿ**
**ತಮ್ಮವ**
**(ಅಮಿತ್ ಶಾ)**

## ಜವಾಬ್ದಾರಿ ನೀಡಿಕೆ



ದಿನಾಂಕ.27.12.2023 ಬೆಂಗಳೂರಿನ ಬಿಜೆಪಿ ಕೇಂದ್ರ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಪದಾಧಿಕಾರಿಗಳ ಸಭೆಯಲ್ಲಿ ಶ್ರೀಮತಿ ಅಂಬಿಕಾ ಎಂ. ಹುಲಿನಾಯ್ಕರ್ ಅವರಿಗೆ ಕಾರ್ಯದರ್ಶಿ ಹುದ್ದೆಯ ನೇಮಕಾತಿ ಪತ್ರದ ಜೊತೆ ಜವಾಬ್ದಾರಿಯನ್ನು ನೀಡುತ್ತಿರುವವರು, ಬಿ.ಜೆ.ಪಿ.ಯ ರಾಜ್ಯಾಧ್ಯಕ್ಷರಾದ ಬಿ.ವೈ.ವಿಜಯೇಂದ್ರ.

# ರಾಜ್ಯದ ಜನತೆಗೆ ಕಾಯಕಯೋಗಿಯ ಆಶೀರ್ವಾದ ದೊರೆಯಲಿ

◀◀ ...ಮೊದಲನೇ ಪುಟದಿಂದ

ನಮ್ಮ ತಂದೆಗೆ ಶ್ರೀಬಸವದೇವರನ್ನು ಕಂಡರೆ ತುಂಬಾ ಭಯ, ಭಕ್ತಿ. ಅವರ ಮಾತಿನಂತೆ ನಡೆದುಕೊಂಡರು. ಶ್ರೀಬಸವದೇವರು ತಮ್ಮ ಬದುಕಿನ ಕೊನೆಯ ತನಕ ಬಸವಣ್ಣ ಅವರ ಆದರ್ಶಗಳಿಗೆ ಅನುಗುಣವಾಗಿ ನಡೆದುಕೊಂಡರು. ಅವರು ತಮ್ಮ ಪ್ರವಚನದಲ್ಲಿ ಚಿತ್ರಿಸಿದ ಅಲ್ಲಮಪ್ರಭು, ಅಕ್ಕಮಹಾದೇವಿ, ಸಿದ್ಧರಾಮ, ದೇವರದಾಸಿಮಯ್ಯ ಮೊದಲಾದ ವಚನಕಾರರು ಇಂದಿಗೂ ನನ್ನ ಮನಸ್ಸಿನಲ್ಲಿ ಉಳಿದಿದ್ದಾರೆ.

ಶಿವಶರಣರ ಬಗ್ಗೆ ಪ್ರೀತಿ ಹುಟ್ಟಿಸಿದವರಲ್ಲಿ ಖ್ಯಾತ ಸಾಹಿತಿಗಳಾದ ಡಾ.ಎಚ್. ತಿಪ್ಪೇರುದ್ರಸ್ವಾಮಿಗಳನ್ನು ಮರೆಯುವಂತಿಲ್ಲ. ಅವರು ಬಸವಣ್ಣನ್ನು ಕುರಿತು ಬರೆದ 'ಕರ್ತಾರನ ಕಮ್ಮಟ' ಇಂದಿಗೂ ನನ್ನ ನೆಚ್ಚಿನ ಕಾದಂಬರಿಯಾಗಿದೆ. ಅದೇ ರೀತಿ ಅವರು ಬರೆದ ಅಲ್ಲಮಪ್ರಭು, ಅಕ್ಕಮಹಾದೇವಿ, ಚೆನ್ನಬಸವಣ್ಣ ಮುಂತಾದವರನ್ನು ಕುರಿತ ಕಾದಂಬರಿಗಳನ್ನು ಓದುತ್ತಿದ್ದರೆ ನಾವೆಲ್ಲಾ ವಚನಕಾರರ ಕಾಲದಲ್ಲಿದ್ದೇವೆ ಎನಿಸುತ್ತಿತ್ತು. ಡಾ. ಎಚ್. ತಿಪ್ಪೇರುದ್ರಸ್ವಾಮಿ ಅವರು ವರ್ಣಿಸುವ ಶಿವಪೂಜೆಯ ದೃಶ್ಯವನ್ನು ಮರೆಯುವಂತಿಲ್ಲ. ಇದು ನನ್ನೊಬ್ಬನ ಅನುಭವವಲ್ಲ. ಎಂಟುನೂರು ವರ್ಷಗಳಿಂದ ಲಕ್ಷಾಂತರ ಜನ ಶಿವಶರಣರ ಪ್ರಭಾವದಲ್ಲಿ ಮಿಂದು ಪುನೀತರಾಗಿದ್ದಾರೆ. ಅವರೆಲ್ಲರ ನಾಯಕಮಣಿ ಬಸವಣ್ಣ.

12ನೆಯ ಶತಮಾನದಲ್ಲಿ ಬಸವಣ್ಣನವರು ಸಾಮಾಜಿಕವಾಗಿ ಅತ್ಯುನ್ನತ ಸ್ಥಾನದಲ್ಲಿದ್ದವರು. ಸಾಮ್ರಾಟ ಬಿಜ್ಜಳನ ಅಮಾತ್ಯರೆಂದರೆ ಸಾಮಾನ್ಯ ಹುದ್ದೆಯೇ? ಆದರೆ ಅವರು 'ಅನುಭವ ಮಂಟಪ'ದ ಅಧ್ಯಕ್ಷಸ್ಥಾನವನ್ನು ಮಹಾಜ್ಞಾನಿ ಅಲ್ಲಮಪ್ರಭುವಿಗೆ ನೀಡಿದ್ದರು. ತಾವು ಸಾಮಾನ್ಯ ಸದಸ್ಯರಾಗಿ ಅನುಭವ ಮಂಟಪದಲ್ಲಿ ಭಾಗವಹಿಸುತ್ತಿದ್ದರು, ಬಸವಣ್ಣ ತಮ್ಮಲ್ಲಿದ್ದ ಇಂತಹ ಉದಾರತೆಗಳಿಂದಾಗಿ ಶ್ರೇಷ್ಠ ನಾಯಕರಾದರು.

12ನೆಯ ಶತಮಾನದ ಬಸವಯುಗದಲ್ಲಿ ಅವರ ಜೊತೆಯಿದ್ದವರ ಪಟ್ಟಿ ನೋಡಿ. ಮಾದಾರ ಚೆನ್ನಯ್ಯ, ಡೋಹರ ಕಕ್ಕಯ್ಯ, ಕಿಂಭಾವಿ ಭೋಗಣ್ಣ, ನುಲಿಯ ಚಂದ್ರಯ್ಯ, ಆಯ್ದಕ್ಕಿ ಮಾರಯ್ಯ, ಸುಂಕದ ಬಂಕಣ್ಣ, ಬಹುರೂಪಿ ಚೌಡಯ್ಯ, ಕನ್ನಡ ಬೊಮ್ಮಯ್ಯ, ಕಿನ್ನರಿ ಬೊಮ್ಮಯ್ಯ, ಗಾಣದ ಕನ್ನಪ್ಪ, ನಗೆಯ ಮಾರಿತಂದೆ, ಮೋಳಿಗೆ ಮಾರಯ್ಯ ಇತ್ಯಾದಿ. ಈ ಪಟ್ಟಿ ಸಾವಿರ ಹೆಸರುಗಳನ್ನೊಳಗೊಂಡಿದೆ. ಇವರೆಲ್ಲಾ ತಳ ಸಮುದಾಯದವರು. ಕಾಯಕಜೀವಿಗಳು. ಸಾಹಿತ್ಯಾಸಕ್ತರು. ತಮ್ಮ ಕಾಯಕದ ಅನುಭವಗಳನ್ನು ವಚನವನ್ನಾಗಿ ಹಾಡಿದವರು. ಇಂತಹ ಎಲ್ಲರನ್ನೊಳಗೊಂಡ ಸಮ ಸಮಾಜ ನಿರ್ಮಾಣದ ಕನಸನ್ನು ಆ ಯುಗದಲ್ಲಿ ಬಸವಣ್ಣನವರನ್ನು ಹೊರತುಪಡಿಸಿ ಬೇರೆ ಯಾರೂ ಕಂಡಿರಲಿಲ್ಲ. ಅವರ ಸಾಮಾಜಿಕಕ್ರಾಂತಿ ಕನ್ನಡನಾಡಿಗೆ ನಿರಂತರವಾಗಿ ಪ್ರೇರಣೆ ಕೊಡುವಂತಹುದು. ಮಹಾಜ್ಞಾನಿ ಅಲ್ಲಮಪ್ರಭು ಹೇಳಿದ ವಚನವೊಂದರ ಮೂಲಕ ಭಕ್ತಿ ಭಂಡಾರಿ ಬಸವಣ್ಣನವರ ವ್ಯಕ್ತಿತ್ವವನ್ನು ತಿಳಿಯಬಹುದು.

**ಕಲ್ಯಾಣವೆಂಬ ಪ್ರಣತಿಯಲ್ಲಿ**
**ಭಕ್ತಿರಸವೆಂಬ ತೈಲವನೆರೆದು**
**ಆಚಾರವೆಂಬ ಬತ್ತಿಯಲಿ**
**ಬಸವಣ್ಣನೆಂಬ ಜ್ಯೋತಿಯ ಮುಟ್ಟಿಸಲು**
**ತೊಳಗಿ ಬೆಳಗಿತ್ತಯ್ಯ ಶಿವನ ಪ್ರಕಾಶ**

ಇಂದು ಮಾನವೀಯತೆ ದುಬಾರಿಯಾದ ವಸ್ತುವಾಗಿದೆ. ಮನುಷ್ಯ-ಮನುಷ್ಯರ ನಡುವೆ, ಜಾತಿ-ಜಾತಿಗಳ ನಡುವೆ, ಧರ್ಮ-ಧರ್ಮಗಳ ನಡುವೆ ಅಸಮಾಧಾನದ ಗೋಡೆ ಏಳುತ್ತಿದೆ. ಬಡವರು ಮತ್ತು ಅಸಹಾಯಕರು ನಿರಂತರವಾಗಿ ಶೋಷಣೆಗೊಳಗಾಗುತ್ತಿದ್ದಾರೆ. ಸಾಂಸ್ಕೃತಿಕ ಅಂಧಾನುಕರಣೆ ಗಗನಕ್ಕೇರಿದೆ. ಸ್ವಾಭಿಮಾನ ಮತ್ತು ಚಿಂತನೆಯ ಮೂಲಭೂತ ಗುಣವನ್ನೇ ಕನ್ನಡಿಗರು ಮರೆತಿರುವ ಸಂದರ್ಭದಲ್ಲಿ ನಾಡಿನ ಜನತೆಗೆ ಪ್ರೇರಣೆ ಕೊಡಬಲ್ಲ ಏಕೈಕ ವ್ಯಕ್ತಿ ಬಸವಣ್ಣನವರಾಗಿದ್ದಾರೆ ಎಂದು ರಾಜ್ಯಸರ್ಕಾರ ಭಾವಿಸಿರುವುದು ಅರ್ಥಪೂರ್ಣವಾಗಿದೆ. ಕಾಯಕಯೋಗಿ ಬಸವಣ್ಣ ಅವರು ನಾಡಿನ ಜನತೆಗೆ ಆಶೀರ್ವಾದ ಮಾಡಲಿ ಎಂದು ಪ್ರಾರ್ಥಿಸುತ್ತೇನೆ.

## ಪದವಿ ಪ್ರಮಾಣಪತ್ರದ ಜೊತೆ ಬದುಕಿಗೆ ಬೇಕಾದ ಕೌಶಲ್ಯ ಕಲಿಸಿ

ಪ್ರತಿವರ್ಷದಂತೆ 2024ರ ಜನವರಿ 2ರಂದು ಶ್ರೀದೇವಿ ಶಿಕ್ಷಣ ಸಂಸ್ಥೆಯ ಹೊಸ ಕ್ಯಾಲೆಂಡರ್ ಬಿಡುಗಡೆ ಮತ್ತು ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆಯ ಎಲ್ಲಾ ವಿಭಾಗ ಮುಖ್ಯಸ್ಥರ ಜೊತೆ ವಿಚಾರ ವಿನಿಮಯ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಬೆಳಗ್ಗೆ 10.30ಕ್ಕೆ ಪ್ರಾರಂಭವಾದ ಕಾರ್ಯಕ್ರಮ ನಿರಂತರವಾಗಿ ಮಧ್ಯಾಹ್ನ 2.30ರ ತನಕ ನಡೆಯಿತು. ಎಲ್ಲಾ ಅಧ್ಯಯನ ವಿಷಯಗಳ ಪ್ರಾಂಶುಪಾಲರು ಕಳೆದ ಶೈಕ್ಷಣಿಕ ವರ್ಷದಲ್ಲಿ ತಮ್ಮ ವಿಭಾಗ ಮಾಡಿದ ಸಾಧನೆ ಮತ್ತು ಮುಂದಿನ ವರ್ಷದ ಕಾರ್ಯಕ್ರಮಗಳ ವಿವರವನ್ನು ಸಭೆಯ ಮುಂದಿಟ್ಟರು. ಒಂದೇ ಕ್ಯಾಂಪಸ್‌ನಲ್ಲಿದ್ದರೂ ಎಷ್ಟೋ ವರ್ಷ ಯಾರು ಏನೂ ಮಾಡುತ್ತಿದ್ದಾರೆ ಎನ್ನುವುದು ಮತ್ತೊಂದು ವಿಭಾಗದ ಮುಖ್ಯಸ್ಥರಿಗೆ ತಿಳಿಯುವುದಿಲ್ಲ. ಅಧ್ಯಯನ ವಿಷಯಗಳ ಪರಸ್ಪರ ವಿನಿಮಯದಿಂದ ಹಿಂದೆ ನಾವು ವಿದ್ಯಾರ್ಥಿ ಜೀವನದಲ್ಲಿ ಪಡೆಯುತ್ತಿದ್ದ ಜ್ಞಾನ ಇಂದಿನ ಯುವಜನಾಂಗಕ್ಕೆ ದೊರೆಯುತ್ತಿಲ್ಲ. ಆ ಕೊರತೆ ಅವರಿಗೆ ಮುಂದೆ ದೊಡ್ಡ ಅನುಕೂಲವಾಗಿ ಪರಿಣಮಿಸುತ್ತದೆ.

ಅಂದು ಶ್ರೀದೇವಿ ಮೆಡಿಕಲ್ ಕಾಲೇಜು, ಪ್ಯಾರಾ ಮೆಡಿಕಲ್ ಮತ್ತು ನರ್ಸಿಂಗ್ ಕೋರ್ಸ್, ಫಿಜಿಯೋಥೆರಪಿ, ಫಾರ್ಮಸಿ, ಪ್ರಯೋಗಾಲಯ (ಲ್ಯಾಬ್) ಮತ್ತು ಶ್ರೀದೇವಿ ಮೆಡಿಕಲ್ ಕಾಲೇಜಿನ ಆಸ್ಪತ್ರೆಯ ಕಳೆದ ಶೈಕ್ಷಣಿಕ ವರ್ಷದ ಸಾಧನೆ ಮತ್ತು ಗುರಿಯನ್ನು ಆಯಾ ವಿಭಾಗದ ಮುಖ್ಯಸ್ಥರು ಪ್ರಸ್ತುತಪಡಿಸಿದರು. ಶ್ರೀದೇವಿ ಇಂಜಿನಿಯರಿಂಗ್ ಕಾಲೇಜು, ಪಾಲಿಟೆಕ್ನಿಕ್ ಕಾಲೇಜು, ಐಟಿಐ, ಎಂಬಿಎ ಮತ್ತು ಇತರೆ ಡಿಗ್ರಿ ಕೋರ್ಸ್‌ಗಳು, ಶ್ರೀದೇವಿ ವಿದ್ಯಾಮಂದಿರ ಮೊದಲಾದ ಸಂಸ್ಥೆಗಳ ಮುಖ್ಯಸ್ಥರು ತಮ್ಮ ವಿಭಾಗದ ಬೆಳವಣಿಗೆಯ ಬಗ್ಗೆ ಮಾಹಿತಿ ನೀಡಿದರು.

ಅವರ ಮಾಹಿತಿಯಿಂದ ವರ್ಷದಿಂದ ವರ್ಷಕ್ಕೆ ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆ ಬೆಳೆಯುತ್ತಾ ಹೋಗುತ್ತಿರುವ ವಿಚಾರ ತಿಳಿಯುತ್ತದೆ. ಪ್ರತಿವರ್ಷ ವಿದ್ಯಾರ್ಥಿಗಳು ಉತ್ತಮ ಶೈಕ್ಷಣಿಕ ಸಾಧನೆ ಮಾಡುತ್ತಾ ಬಂದಿದ್ದಾರೆ. ನಿರಂತರವಾಗಿ ಒಂದಲ್ಲ ಒಂದು ವಿಭಾಗದಲ್ಲಿ ವಿಶ್ವವಿದ್ಯಾನಿಲಯಗಳಿಂದ ರ್‍ಯಾಂಕ್‌ಗಳು ಬರುತ್ತಿವೆ. ಅನೇಕ ಕಂಪನಿಗಳು ಕ್ಯಾಂಪಸ್ ಆಯ್ಕೆಗೆ ನಮ್ಮಲ್ಲಿಗೆ ಬಂದು ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ. ಪಠ್ಯೇತರ ಚಟುವಟಿಕೆಯಲ್ಲೂ ಶ್ರೀದೇವಿ ಶಿಕ್ಷಣ ಸಂಸ್ಥೆಯ ಸಾಧನೆ ಗಮನಾರ್ಹವಾಗಿತ್ತು. ಇದಕ್ಕೆ ಕಾರಣಕರ್ತರಾದವರು ಬೋಧಕವರ್ಗ ಮತ್ತು ವಿದ್ಯಾರ್ಥಿಗಳು. ಅವರ ಪ್ರಾಮಾಣಿಕ ದುಡಿಮೆ ಶ್ರೀದೇವಿ ಶಿಕ್ಷಣ ಸಂಸ್ಥೆಯ ಯಶಸ್ಸಿಗೆ ಕಾರಣವಾಗಿದೆ. ಅದಕ್ಕೆ ಅವರನ್ನು ಅಭಿನಂದಿಸಿದೆ.

ಈ ಸಮಾಗಮಕ್ಕೆ ಅನಿರೀಕ್ಷಿತವಾಗಿ ತುಮಕೂರು ವಿಶ್ವವಿದ್ಯಾನಿಲಯದ ಒ.ಖ.ಫ ನಲ್ಲಿ ಪ್ರಾಧ್ಯಾಪಕರಾಗಿರುವ ಡಾ. ಪರಶುರಾಮ ಅವರು ಆಗಮಿಸಿ 'ಕಳೆದ ನಾಲ್ಕು ದಶಕಗಳಲ್ಲಿ ಈ ಸಂಸ್ಥೆ ಬೆಳೆದ ಪರಿಯನ್ನು ವರ್ಣಿಸಿದರು. ಶ್ರೀದೇವಿ ಶಿಕ್ಷಣ ಸಂಸ್ಥೆ ಎರಡು ಸಾವಿರ ಜನರಿಗೆ ಉದ್ಯೋಗ ದೊರಕಿಸಿ ಕೊಟ್ಟಿರುವುದು ಸಾಮಾನ್ಯದ ಸಂಗತಿಯಲ್ಲ, ಇಂದು ಬೃಹತ್ ಉದ್ಯಮಗಳು ಬೆರಳೆಣಿಕೆಯಷ್ಟು ಜನರಿಗೆ ಮಾತ್ರ ಉದ್ಯೋಗ ಕೊಡಲು ಸಮರ್ಥವಾಗಿದೆ. ಅಂತಹುದರಲ್ಲಿ ಮಾನವ ಸಂಪನ್ಮೂಲದ ಬಳಕೆಯಲ್ಲಿ ಶ್ರೀದೇವಿ ಶಿಕ್ಷಣ ಸಂಸ್ಥೆ ಮಾಡುತ್ತಿರುವ ಕೆಲಸ ಸ್ವಾಗತಾರ್ಹವಾದದ್ದು" ಎಂದು ಬಣ್ಣಿಸಿದರು. ಮುಂದುವರಿದು 'ಬೋಧಕವರ್ಗ ನೈಜ ಸಂಶೋಧನೆಯ ಕಡೆಗೆ ಗಮನ ಕೊಡಬೇಕು' ಎಂದರು.

ನಾನು ಕೊನೆಯಲ್ಲಿ ಮಾತನಾಡಬೇಕಾಯಿತು. ಸಮಯದ ಅಭಾವದಿಂದ ಕೆಲವು ವಿಚಾರಗಳನ್ನು ಮಾತ್ರ ಹೇಳಿದೆ. ಅವುಗಳಲ್ಲಿ ಕೆಲವು ಇಲ್ಲಿ ಪ್ರಸ್ತಾಪಿಸುತ್ತೇನೆ. ಪ್ರಾಂಶುಪಾಲರು ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ನಾವು ಟೀಂನ ಲೀಡರ್ ಎನ್ನುವುದನ್ನು ಮರೆಯಬಾರದು. ತಾವೇ ಹೆಚ್ಚು ಮಾತನಾಡದೆ ತಾತ್ವಿಕ ಸಂಗತಿಗಳನ್ನು ಮಾತ್ರ ತಿಳಿಸಿ, ತಮ್ಮ ಸಹೋದ್ಯೋಗಿಗಳು ಹೆಚ್ಚು ಪ್ರತಿಕ್ರಿಯಿಸುವಂತೆ ಮಾಡಬೇಕು. ತಮ್ಮ ಎಲ್ಲಾ ಸಹೋದ್ಯೋಗಿಗಳಿಂದ ಸಮರ್ಥವಾಗಿ ಕೆಲಸವನ್ನು ಯಾರು ತೆಗೆಯುತ್ತಾರೋ ಅವರೇ ಸಮರ್ಥರಾದ ಲೀಡರ್ ಅಂದರೆ ಪ್ರಾಂಶುಪಾಲರು. ಕಾಲೇಜಿನ ಎಲ್ಲಾ ಬೋಧಕವರ್ಗ ಕ್ರಿಯಾಶೀಲವಾಗಿ ಕೆಲಸ ಮಾಡಿದರೆ ಸಂಸ್ಥೆ ಮತ್ತು ವಿದ್ಯಾರ್ಥಿಗಳಿಗೆ ದೊಡ್ಡ ಪ್ರಮಾಣದಲ್ಲಿ ಪ್ರಯೋಜನ ದೊರೆಯುತ್ತದೆ. ಪಿಹೆಚ್.ಡಿ. ಮಾಡಿದ ಅಧ್ಯಾಪಕರನ್ನು ಅಭಿನಂದಿಸಬೇಕು. ಅವರ ಸಂಶೋಧನೆ ಕೇವಲ ವಿಶ್ವವಿದ್ಯಾನಿಲಯದ ನಿಯಮಾವಳಿಯನ್ನು ತೃಪ್ತಿ ಪಡಿಸುವುದಕ್ಕೆ ಸೀಮಿತವಾಗಬಾರದು. ಅವರು ಸಂಶೋಧನಾಕ್ಷೇತ್ರದಲ್ಲಿ ನಿರಂತರವಾಗಿ ಕೆಲಸ ಮಾಡಿದರೆ ಮಾತ್ರ ಅವರ ಅಧ್ಯಯನ ವಿಷಯಕ್ಕೆ ಪ್ರಯೋಜನವಾಗುತ್ತದೆ. ಪಿಹೆಚ್.ಡಿ. ಪಡೆಯದ ಬೋಧಕವರ್ಗಕ್ಕೆ ಪ್ರಾಂಶುಪಾಲರು ಪ್ರೇರಣೆ ನೀಡಿ ಅವರು ಸಂಶೋಧನೆಯನ್ನು ಕೈಗೊಳ್ಳುವಂತೆ ಮಾಡಬೇಕು.

ಅಂದು ನಾನು ಪ್ರಸ್ತಾಪಿಸಿದ ಪ್ರಮುಖ ವಿಷಯ, ನಮ್ಮ ಶ್ರೀದೇವಿ ಶಿಕ್ಷಣ ಸಂಸ್ಥೆಯಲ್ಲಿ ತಾಂತ್ರಿಕ ಶಿಕ್ಷಣ ಬಯಸಿ ಬರುವ ಮಕ್ಕಳು ಗ್ರಾಮೀಣ ಮತ್ತು ಮಧ್ಯಮವರ್ಗಕ್ಕೆ ಸೇರಿದ್ದಾರೆ. ಅದರಲ್ಲೂ ಪರಿಶಿಷ್ಟ ಜಾತಿ ಮತ್ತು ವರ್ಗ ಹಾಗೂ ಹಿಂದುಳಿದ ಸಮುದಾಯಕ್ಕೆ ಸೇರಿದ ವಿದ್ಯಾರ್ಥಿಗಳು ಗಣನೀಯ ಸಂಖ್ಯೆಯಲ್ಲಿರುತ್ತಾರೆ. ಹೊರರಾಜ್ಯದ ಮಕ್ಕಳಲ್ಲೂ ಮಧ್ಯಮವರ್ಗದವರ ಸಂಖ್ಯೆ ದೊಡ್ಡ ಪ್ರಮಾಣದಲ್ಲಿರುತ್ತದೆ. ನಮ್ಮ ಶ್ರೀದೇವಿ ತಾಂತ್ರಿಕ ಶಿಕ್ಷಣ ಸಂಸ್ಥೆಯಲ್ಲಿ 'ಖಇುಟಟ ಐಚಿಛ ಚಿಟಿಜ ಖಜಜಚಿ ಐಚಿಛ' ಎರಡೂ ಕ್ರಿಯಾಶೀಲವಾಗಿ ಕೆಲಸ ಮಾಡುತ್ತಿವೆ. ಅದನ್ನು ವಿದ್ಯಾರ್ಥಿಗಳು ಸದುಪಯೋಗಪಡಿಸಿಕೊಳ್ಳಲು ಅಧ್ಯಾಪಕವರ್ಗ ಅವರಿಗೆ ಮಾರ್ಗದರ್ಶನ ನೀಡಬೇಕಾಗಿದೆ.

ದೆಹಲಿ ಮ್ಯಾನೇಜ್‌ಮೆಂಟ್ ಸಂಸ್ಥೆ ನಡೆಸಿದ ಸಮೀಕ್ಷೆ ಪ್ರಕಾರ ಸಾಫ್ಟ್‌ವೇರ್ ಪದವಿ ಪಡೆದ ಇಂಜಿನಿಯರ್‌ಗಳಲ್ಲಿ ಶೇಕಡ 3.8ರಷ್ಟು ಅಭ್ಯರ್ಥಿಗಳು ಮಾತ್ರ ಕೆಲಸ ಮಾಡುವ ಅರ್ಹತೆ ಪಡೆದಿರುತ್ತಾರೆ. ಮಶೀನ್ ಲರ್ನಿಂಗ್, ಡೇಟಾ ಇಂಜಿನಿಯರಿಂಗ್ ಮತ್ತು ಮೊಬೈಲ್ ತಂತ್ರಜ್ಞಾನದಲ್ಲಿ ಉದ್ಯೋಗ ಪಡೆದ ಶೇಕಡ 60ಮಂದಿಗೆ ಕಾಲೇಜು ವಿದ್ಯಾಭ್ಯಾಸದ ಕಾಲದಲ್ಲಿ ದೊರೆತ ಜ್ಞಾನ ವೃತ್ತಿಯ ಆರಂಭದ ಕಾಲದಲ್ಲಿ ಪ್ರಯೋಜನಕ್ಕೆ ಬರುತ್ತಿಲ್ಲ. ಇವರಿಗೆ ಪಠ್ಯಜ್ಞಾನದ ಜೊತೆ ಸ್ಕಿಲ್ ಕೂಡ ಅಗತ್ಯವಿರುತ್ತದೆ. ತಾಂತ್ರಿಕ ಶಿಕ್ಷಣ ವಲಯದಲ್ಲಿ ಕೆಲಸ ಮಾಡುವ ಬೋಧಕವರ್ಗ ಈ ವಿಚಾರದಲ್ಲಿ ಗಂಭೀರವಾಗಿ ಯೋಚಿಸುವ ಅಗತ್ಯವಿದೆ. ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣಪತ್ರದ ಜೊತೆ ವೃತ್ತಿಯಲ್ಲಿ ಯಶಸ್ವಿಯಾಗುವ ಕೌಶಲವನ್ನೂ ಕಲಿಸಿಕೊಡಬೇಕಾಗಿದೆ.

ಶ್ರೀದೇವಿ ವೈದ್ಯಕೀಯ ಸಂಸ್ಥೆ ಮತ್ತು ಅರೆವೈದ್ಯಕೀಯ ಸಂಸ್ಥೆಗಳಲ್ಲಿ ಕೆಲಸ ಮಾಡುವ ಬೋಧಕವರ್ಗಕ್ಕೆ ಯಥೇಚ್ಛವಾದ ಅವಕಾಶಗಳಿವೆ. ಅವರಿಗೆ ಎಂಟು ನೂರು ಹಾಸುಗೆಯ ಶ್ರೀದೇವಿ ಆಸ್ಪತ್ರೆ ದೊಡ್ಡ ವರದಾನವಾಗಿರುತ್ತದೆ. ಯುರೋಪ್‌ನ ಅನೇಕ ವೈದ್ಯರು ತಮ್ಮ ಪ್ರಯೋಗಗಳನ್ನು ಅನುಷ್ಠಾನ ಮಾಡಲು ಆಫ್ರಿಕಾದೇಶಗಳನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದರು. ಅಮೆರಿಕಾದ ಹೆಸರಾಂತ ವೈದ್ಯರಾದ ಪ್ರೊ. ಬರ್ನಾರ್ಡ್ ಅವರು ಹೃದಯದ ಬೈಪಾಸ್ ಸರ್ಜರಿ ಮತ್ತು ಬದಲಿ ಹೃದಯ ಜೋಡಣೆಯ ಶಸ್ತ್ರಚಿಕಿತ್ಸೆಯನ್ನು ಮೊದಲ ಸಲ ಕೇಪ್‌ಟೌನ್‌ನಲ್ಲಿ ಮಾಡಿದ್ದರು. ಅದಕ್ಕೆ ಕಾರಣಗಳು ಬೇರೆಯಿದೆ.

ಭಾರತದಲ್ಲಿ ಅಂತಹ ಪರಿಸ್ಥಿತಿಯಿಲ್ಲ. ಹೊಸ ವೈದ್ಯಕೀಯ ಸಂಶೋಧನೆಗಳಿಗೆ ಯಥೇಚ್ಛವಾದ ಅವಕಾಶಗಳಿವೆ. ನಮ್ಮ ದೇಶದಲ್ಲಿ ಏಳುನೂರು ವೈದ್ಯಕೀಯ ಕಾಲೇಜುಗಳಿವೆ. ಅದರಲ್ಲಿ ಹತ್ತು-ಹನ್ನೆರಡು ಕಾಲೇಜಿನ ಪ್ರಾಧ್ಯಾಪಕರು ಮತ್ತು ಉಪನ್ಯಾಸಕರು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಪತ್ರಿಕೆಗಳಿಗೆ ಲೇಖನ ಬರೆಯುತ್ತಾರೆ. ಉಳಿದ ಕಾಲೇಜಿನ ಪ್ರಾಧ್ಯಾಪಕರು ಮತ್ತು ಬೋಧಕವರ್ಗ ವಿದ್ಯಾರ್ಥಿಗಳಿಗೆ ಪಾಠ ಹೇಳುವುದು ತಮ್ಮ ಕ್ಲಿನಿಕ್‌ಗಳಲ್ಲಿ ಬಿಜಿಯಾಗಿರುತ್ತಾರೆ. ಆ ಕೆಲಸಗಳು ಮುಖ್ಯವೇ. ಜೊತೆಗೆ ಅವರು ತಮ್ಮ ಅನುಭವವನ್ನು ಸಂಶೋಧನೆಯ ಕಡೆ ತಿರುಗಿಸಬೇಕು. ತಜ್ಞ ವೈದ್ಯಕೀಯ ಪ್ರಾಧ್ಯಾಪಕರು ತಮ್ಮ ಅನುಭವವನ್ನು ದಾಖಲೀಕರಣ ಮಾಡಿದರೆ ವಿಶ್ವದ ವೈದ್ಯಕೀಯಲೋಕಕ್ಕೆ ಅಮೂಲ್ಯ ಕಾಣಿಕೆ ದೊರೆಯುತ್ತದೆ. ವಿದ್ಯಾರ್ಥಿಗಳಿಗೆ ಪದವಿಯ ಜೊತೆ ಕೌಶಲ್ಯ ಕಲಿಕೆ ಮುಖ್ಯವೆಂದು ತಿಳಿಯಲು ಅಧ್ಯಾಪಕರೇ ಮಾರ್ಗದರ್ಶನ ನೀಡಬೇಕು. ಇಂದು ವೈದ್ಯಕೀಯ ಪದವಿ ಗಳಿಸಿದ ನಂತರ ವೈದ್ಯಕೀಯ ವಿದ್ಯಾರ್ಥಿಗಳು ಆಸ್ಪತ್ರೆಗೆ ಬರುವುದಿಲ್ಲ. ಲೈಬ್ರರಿಗೆ ಹೋಗುತ್ತಾರೆ. ಅವರಿಗೆ ಪ್ರಾಯೋಗಿಕ ಅನುಭವ ಬರುವುದು ಹೇಗೆ?

ಅಂತಹವರಿಗೆ ಪ್ರೇರಣೆ ದೊರೆಯಲು ಆಯಾಯ ವಿಭಾಗದ ಅಧ್ಯಾಪಕರು ಮತ್ತು ಪ್ರಾಧ್ಯಾಪಕರು ಮಾಡಬೇಕಾಗಿದೆ. ಅಂತಹ ಒಂದು ಹೊಸ ಸಂಶೋಧನೆಯಿಂದ ಶಿಕ್ಷಣಸಂಸ್ಥೆಗೆ ಅಪಾರವಾದ ಕೀರ್ತಿ ದೊರೆಯುತ್ತದೆ. ಇಂತಹ ಸಂಶೋಧನೆಗಳಿಗೆ ಸಂಪನ್ಮೂಲದ ಕೊರತೆ ಬೀಳುವುದಿಲ್ಲ. ಅದನ್ನು ಶ್ರೀದೇವಿ ಶಿಕ್ಷಣ ಸಂಸ್ಥೆ ವಹಿಸಿಕೊಳ್ಳುತ್ತದೆ. ಈ ಸಂಶೋಧನೆ ಕೈಗೊಳ್ಳುವ ಪ್ರಾಧ್ಯಾಪಕರಿಗೆ ಅಗತ್ಯವಾದ ಆರ್ಥಿಕ ಮತ್ತು ನೈತಿಕ ಬೆಂಬಲವನ್ನು ಸಂಸ್ಥೆ ಕೊಡುವುದರಲ್ಲಿ ಹಿಂದೆ ಬೀಳುವುದಿಲ್ಲ. ಅನೇಕ ಅಧ್ಯಾಪಕರು ತಮ್ಮ ಸಂಶೋಧನಾ ಲೇಖನಗಳನ್ನು ಕೆಲವು ಪತ್ರಿಕೆಗಳಲ್ಲಿ ಪ್ರಕಟಿಸಿದ್ದಾರೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ಗಮನ ಸೆಳೆಯುವ ಸಂಶೋಧನೆಯನ್ನು ಕೈಗೊಂಡು, ಅದಕ್ಕೆ ಸಂಬಂಧಪಟ್ಟ ಸಂಶೋಧನಾ ಲೇಖನಗಳನ್ನು ಪ್ರಕಟಿಸಿದರೆ ಅದರಿಂದ ಶಿಕ್ಷಣ ಸಂಸ್ಥೆ ಮತ್ತು ದೇಶಕ್ಕೆ ಕೀರ್ತಿ ದೊರೆಯುತ್ತದೆ.

ಸರ್ಕಾರ ಸಾಕಷ್ಟು ಸಂಖ್ಯೆಯಲ್ಲಿ ವಿಶ್ವವಿದ್ಯಾನಿಲಯಗಳನ್ನು ಮಾಡುತ್ತಿರುವ ಕಾರಣ ಇದೇ ಆಗಿದೆ. ಸ್ಥಳೀಯ ಮಟ್ಟದಲ್ಲಿ ಸಂಶೋಧನಾ ಕಾರ್ಯ ನಡೆಯದಿದ್ದರೆ ಉನ್ನತ ಶಿಕ್ಷಣದ ಮೂಲ ಆಶಯವೇ ವ್ಯರ್ಥವಾದಂತೆ ಎನ್ನಬಹುದು.

■ ನಿರೂಪಣೆ: ಶ್ರೀವತ್ಸ

ಪತ್ರಿಕೆಯ ಬಳಗ

ಪ್ರಧಾನ ಸಂಪಾದಕರು
**ಡಾ. ಎಂ. ಆರ್. ಹುಲಿನಾಯ್ಕರ್**

ಗೌರವ ಸಂಪಾದಕರು
**ಡಾ. ಕೆ.ಆರ್.ಕಮಲೇಶ**

ಕಾರ್ಯನಿರ್ವಾಹಕ ಸಂಪಾದಕರು
**ಡಾ. ರಮಣ ಎಂ. ಹುಲಿನಾಯ್ಕರ್**

ಸಂಪಾದಕರು
**ಅಂಬಿಕಾ ಎಂ. ಹುಲಿನಾಯ್ಕರ್**

ಸಂಯೋಜಕ ಸಂಪಾದಕರು
**ಎಂ.ಎಸ್.ಪಾಟೀಲ್**

ಸಲಹಾ ಸಂಪಾದಕರು
**ಎನ್.ಭಾರತಿ**

ಸಂಪಾದಕ ಮಂಡಲಿ
**ಡಾ. ಭವಾನಿ ಸ್ಟಾಲಿನ್**
**ಡಾ. ಮನೋನ್ಮಣಿ ಎಂ.ಎಚ್**
**ಡಾ. ಲಾವಣ್ಯ ರಮಣ**

ಸಹಾಯಕ ಸಂಪಾದಕರು: **ಎನ್. ಆನಂದ** ಪುಟ ವಿನ್ಯಾಸ: **ಸುಮಾ ಸಾಗರ್**

# ಪ್ರೇರಣಾ ದಿನದ ಆಚರಣೆ ಏಕೆ ?



ಮನದ ಮಾತು
ಡಾ. ರಮಣ ಎಂ ಹುಲಿನಾಯ್ಕರ್
ಕಾರ್ಯನಿರ್ವಾಹಕ ಸಂಪಾದಕರು
ನಿರ್ದೇಶಕರು, ಶ್ರೀದೇವಿ ವೈದ್ಯಕೀಯ ಕಾಲೇಜು

**ಡಾ ಬಿ. ಆರ್. ಅಂಬೇಡ್ಕರ್ ಅವರ ಜೀವನ ಮತ್ತು ತತ್ವಗಳು ಸಮಾಜದಲ್ಲಿ ಅನ್ಯಾಯದ ವಿರುದ್ಧ ಹೋರಾಡುವವರಿಗೆ ಶಕ್ತಿ ನೀಡಿದೆ. ಹಿಂದೆ ಡಾ.ಅಂಬೇಡ್ಕರ್ ಅವರನ್ನು ವಿರೋಧಿಸುತ್ತಿದ್ದವರು, ಇಂದು ಅವರು ನೀಡಿದ ಸಂವಿಧಾನದ ಬಲದಿಂದಲೇ ತಮ್ಮ ಹಕ್ಕನ್ನು ಸ್ಥಾಪಿಸಿಕೊಳ್ಳುತ್ತಿದ್ದಾರೆ. ಅವರ ಕಾರ್ಯಗಳು ಸಮಾಜದಲ್ಲಿನ ದೀನದಲಿತರು ಮತ್ತು ಹಿಂದುಳಿದ ವರ್ಗಗಳಿಗೆ ಸಾಕಷ್ಟು ರಕ್ಷಣೆ ನೀಡಿದೆ. ಅದರಂತೆ ಡಾ. ಹುಲಿನಾಯ್ಕರ್ ಅವರು ಪ್ರಾರಂಭಿಸಿರುವ ಸಾಮಾಜಿಕ, ಶೈಕ್ಷಣಿಕ ಮತ್ತು ಸಮಾಜದ ವ್ಯಕ್ತಿಗಳ ಆರೋಗ್ಯ ರಕ್ಷಣಾ ಕಾರ್ಯವು ನಿರಂತರವಾಗಿ ಮುಂದುವರಿಯುತ್ತದೆ.**


2023ರ ನವೆಂಬರ್ 25 ತುಮಕೂರಿನ ಶ್ರೀದೇವಿ ಶಿಕ್ಷಣ ಸಂಸ್ಥೆ ಮತ್ತು ಶ್ರೀದೇವಿ ಆಸ್ಪತ್ರೆಗಳ ಇತಿಹಾಸದಲ್ಲಿ ಸುವರ್ಣಾಕ್ಷರದಿಂದ ಬರೆಯಲ್ಪಡುವ ದಿನವಾಗಿದೆ. ಅಂದು ಶ್ರೀದೇವಿ ಕ್ಯಾಂಪಸ್‌ನ ಮೈದಾನವು ಪ್ರೀತಿ ಮತ್ತು ಅಭಿಮಾನದ ಕಡಲಿಂದ ತುಂಬಿ ತುಳುಕುತ್ತಿತ್ತು. ತುಮಕೂರು ಜಿಲ್ಲೆ ಸೇರಿದಂತೆ ಕರ್ನಾಟಕದ ನಾನಾ ಭಾಗಗಳಿಂದ ಸುಮಾರು ಹತ್ತುಸಾವಿರಕ್ಕೂ ಹೆಚ್ಚಿನ ಸಹೃದಯ ಬಂಧುಗಳು ಆಗಮಿಸಿ, ಡಾ. ಎಂ.ಆರ್. ಹುಲಿನಾಯ್ಕರ್‌ರ ಅಮೃತ ಮಹೋತ್ಸವ ಸಮಾರಂಭದಲ್ಲಿ ಪಾಲ್ಗೊಂಡು ಸಂತೋಷಪಟ್ಟರು.

ಡಾ ಎಂ.ಆರ್.ಹುಲಿನಾಯ್ಕರ್ ಅವರು ತಮ್ಮ ಎಪ್ಪತ್ತೈದು ವರ್ಷಗಳ ತುಂಬು ಜೀವನವನ್ನು ದಾಖಲು ಮಾಡಲು ನಿರ್ಧಾರ ಮಾಡಿದ್ದೇ ರೋಚಕ ಘಟನೆ. ಅವರ ಅನುಭವಗಳನ್ನು ಡಾ.ಕೆ.ಆರ್.ಕಮಲೇಶ್ ಅಷ್ಟೇ ಸಮರ್ಥವಾಗಿ ಅಕ್ಷರ ರೂಪಕ್ಕಿಳಿಸಿದ್ದಾರೆ. ಡಾ.ಎಂ.ಆರ್.ಹುಲಿನಾಯ್ಕರ್ ಅವರ ಆತ್ಮಕಥನ 'ಅಂತರಂಗದ ಅವಲೋಕನ' ಶ್ರೀದೇವಿ ಆಸ್ಪತ್ರೆ ಮತ್ತು ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆಗಳ ಇತಿಹಾಸದಲ್ಲಿ, ಎಲ್ಲರಿಗೆ ಮಾರ್ಗದರ್ಶನ ನೀಡುವ ಅಮೂಲ್ಯ ಕೃತಿಯಾಗಿ ಹೊರಬಂದಿರುವುದು ಮಹತ್ವದ ಸಂಗತಿಯಾಗಿದೆ. ಇದರ ಲೋಕಾರ್ಪಣೆ ಮತ್ತು ಡಾ.ಹುಲಿನಾಯ್ಕರ್ ದಂಪತಿಗಳ ಅಪೂರ್ವ ಸಮಾಜಸೇವೆಗೆ ಕೃತಜ್ಞತೆ ಸಲ್ಲಿಸುವುದಕ್ಕಾಗಿ 'ಡಾ. ಎಂ.ಆರ್.ಹುಲಿನಾಯ್ಕರ್ ಅಮೃತ ಮಹೋತ್ಸವ ಸಮಿತಿ' ರಚನೆಯಾಗಿತ್ತು, ಆ ಸಮಿತಿ ಸಮಾರಂಭವನ್ನು ಏರ್ಪಡಿಸಿತ್ತು.

ಅಮೃತ ಮಹೋತ್ಸವದ ಸಮಾರಂಭಕ್ಕೆ ಘನತೆ ತಂದುಕೊಟ್ಟವರು ಮಾಜಿ ಮುಖ್ಯಮಂತ್ರಿ ಬಿ. ಎಸ್. ಯಡಿಯೂರಪ್ಪ, ಕರ್ನಾಟಕ ಸರ್ಕಾರದ ಗೃಹಸಚಿವ ಡಾ. ಜಿ. ಪರಮೇಶ್ವರ್, ಸಹಕಾರ ಖಾತೆ ಸಚಿವ ಕೆ.ಎನ್.ರಾಜಣ್ಣ, ತುಮಕೂರು ನಗರದ ವಿಧಾನಸಭೆಯ ಸದಸ್ಯರಾದ ಜಿ.ಬಿ. ಜ್ಯೋತಿಗಣೇಶ್, ಖ್ಯಾತ ಸಂಶೋಧಕರಾದ ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್ ಮತ್ತು ವಿಜಯವಾಣಿ ಪತ್ರಿಕೆಯ ಸಹಾಯಕ ಸಂಪಾದಕರಾದ ರುದ್ರಣ್ಣ ಹರ್ತಿಕೋಟೆ,

ಅಮೃತ ಸಮಿತಿಯ ಅಧ್ಯಕ್ಷರೂ ಮತ್ತು ಪ್ರಜಾಪ್ರಗತಿ ಪತ್ರಿಕೆಯ ಸಂಪಾದಕರಾದ ಎಸ್. ನಾಗಣ್ಣ, ಗೌರವಾಧ್ಯಕ್ಷರಾದ ಟಿ.ಆರ್. ಆಂಜನಪ್ಪ ಮತ್ತು ಪ್ರಧಾನ ಸಂಚಾಲಕರಾದ ಟಿ.ಎನ್.ಮಧುಕರ ಅವರು ಸಮಾರಂಭ ಯಶಸ್ವಿಯಾಗುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

ಇದಕ್ಕೆ ಕಿರೀಟಪ್ರಾಯವಾಗಿ ಕಾಗಿನೆಲೆ ಗುರುಪೀಠದ ಜಗದ್ಗುರು ಪರಮಪೂಜ್ಯ ಶ್ರೀ ಶ್ರೀ ಶ್ರೀ ನಿರಂಜನಾನಂದಪುರಿ ಮಹಾಸ್ವಾಮೀಜಿ ಅವರು ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ್ದರು. ಡಾ.ಎಂ.ಆರ್. ಹುಲಿನಾಯ್ಕರ್ ಅವರ ಜೀವನ ಸರಳತೆ ಮತ್ತು ಸಾಧನೆಗಳ ಸಂಮಿಶ್ರಣವಾಗಿದೆ. ಅವರ ಬದುಕಿನ ಕೆಲವು ಪುಟಗಳನ್ನು ತಿರುವಿ ಹಾಕಿದರೆ ಸಾಕು ಅಲ್ಲಿರುವ ಸಾಧನೆ ಮತ್ತು ಜೀವನಾನುಭವದಿಂದ ಯಾರಾದರೂ ಬೆರಗಾಗುತ್ತಾರೆ. ಓರ್ವ ವ್ಯಕ್ತಿ ಅಲ್ಪ ಕಾಲದಲ್ಲಿ ಇಷ್ಟೊಂದು ಸಾಧನೆ ಮಾಡುವುದು ಮತ್ತು ಆ ಸಾಧನೆಯಿಂದ ವೈಯಕ್ತಿಕವಾಗಿ ಯಾವುದೇ ಅಹಂಕಾರವನ್ನು ಬೆಳೆಸಿಕೊಳ್ಳದಿರುವುದು ಸಾಧ್ಯವೇ ಎನ್ನುವ ಆಲೋಚನೆ ಒಮ್ಮರಿಗೆ ಬಂದರೆ ಆಶ್ಚರ್ಯವಿಲ್ಲ.



ಸವಾಲುಗಳ ನಡುವೆಯೂ ರಾಷ್ಟ್ರೀಯವಾಗಿ ಮಾನ್ಯತೆ ಪಡೆದ ಶ್ರೀದೇವಿ ಸಮೂಹ ಸಂಸ್ಥೆಗಳನ್ನು ಸ್ಥಾಪಿಸುವಲ್ಲಿ ಡಾ. ಹುಲಿನಾಯ್ಕರ್ ಅವರ ಸತತ ಪರಿಶ್ರಮವನ್ನು ಗುರುತಿಸಿ, ಅವರ ಅಪರೂಪದ ಸೇವೆಗೆ ಪ್ರೀತಿ, ಗೌರವ ಮತ್ತು ಕೃತಜ್ಞತೆ ತೋರಿಸಿ ಆಶೀರ್ವಾದ ಮಾಡಲು ತುಮಕೂರು ಸೇರಿದಂತೆ ರಾಜ್ಯದ ಜನತೆ ಆಗಮಿಸಿದ್ದರು.

ಶ್ರೀದೇವಿ ಸಮೂಹವು ಸಾವಿರಾರು ಜನರಿಗೆ ಉದ್ಯೋಗವನ್ನು ಒದಗಿಸಿದೆ. ಸಾಮಾಜಿಕ ಮತ್ತು ಆರ್ಥಿಕ ಹಿನ್ನೆಲೆಯನ್ನೂ ಲೆಕ್ಕಿಸದೆ, ಪ್ರತಿವರ್ಷ ಸಾವಿರಾರು ವಿದ್ಯಾರ್ಥಿಗಳಿಗೆ ಕೌಶಲಾಧಾರಿತ ಶಿಕ್ಷಣ ಒದಗಿಸುವ ಮೂಲಕ ಅವರನ್ನು ಜವಾಬ್ದಾರಿಯುತ ನಾಗರಿಕರನ್ನಾಗಿ ಮಾಡುವ ಕೆಲಸವನ್ನು ಶ್ರೀದೇವಿ ಶಿಕ್ಷಣ ಸಂಸ್ಥೆ ಮಾಡುತ್ತಿದೆ. ಅದೇ ರೀತಿ ಪ್ರತಿವರ್ಷ ಲಕ್ಷಾಂತರ ರೋಗಿಗಳ ಆರ್ಥಿಕ ಹಿನ್ನೆಲೆಯನ್ನು ಲೆಕ್ಕಿಸದೆ ಅವರೆಲ್ಲರಿಗೆ ಗುಣಮಟ್ಟದ ಆರೋಗ್ಯಸೇವೆಯನ್ನು ಒದಗಿಸಲಾಗುತ್ತಿದೆ. ಇದರ ಪ್ರೇರಕರು ಡಾ ಎಂ. ಆರ್. ಹುಲಿನಾಯ್ಕರ್ ಎಂಬುದನ್ನು ಮರೆಯುವಂತಿಲ್ಲ. ಅವರ ಸಾಧನೆ ನಿಜಕ್ಕೂ ಅಸಾಧಾರಣ ಮತ್ತು ನಮಗೆಲ್ಲಾ ಸ್ಫೂರ್ತಿದಾಯಕ.

ಕಾರ್ಯಕ್ರಮ ಮುಗಿದ ಕೆಲವೇ ದಿನಗಳಲ್ಲಿ ಅಮೃತ ಮಹೋತ್ಸವದ ಕೃತಜ್ಞತಾ ಸಮಾರಂಭದಲ್ಲಿ ಡಾ. ಎಂ. ಆರ್. ಹುಲಿನಾಯ್ಕರ್ ಅವರ ಅಭಿಮಾನಿಗಳು ಮತ್ತು ಶ್ರೀದೇವಿ ಸಮೂಹ ಸಂಸ್ಥೆಗಳ ಸಿಬ್ಬಂದಿ ಡಾ. ಎಂ.ಆರ್. ಹುಲಿನಾಯ್ಕರ್ ಅವರ ಜನ್ಮದಿನವನ್ನು ವಾಡಿಕೆಯಂತೆ ಆಚರಿಸುವ ಬದಲು "ಪ್ರೇರಣಾದಿನ"ವನ್ನಾಗಿ ಎಂದು ಆಚರಿಸಬೇಕು ಎಂಬ ಸಲಹೆಯನ್ನು ಮುಂದಿಟ್ಟರು. ಇದೊಂದು ಸ್ವಾಗತಾರ್ಹವಾದ ಸಲಹೆಯಾಗಿತ್ತು. ಸ್ವಾಮಿ ವಿವೇಕಾನಂದ ಅವರಂತೆ ಡಾ.ಎಂ.ಆರ್. ಹುಲಿನಾಯ್ಕರ್ ಅವರು ತಮ್ಮ ಪರಿಸರಕ್ಕೆ ಬರುವ ಎಲ್ಲಾ ಯುವಜನಾಂಗವನ್ನು ನಿರಂತರವಾಗಿ ಪ್ರೇರೇಪಿಸುತ್ತಾರೆ ಎಂಬುದನ್ನು ಅವರ ಆತ್ಮಕಥನ ಹೇಳುತ್ತದೆ. ಅವರ ಜನ್ಮದಿನ ಯುವಜನಾಂಗಕ್ಕೆ ಪ್ರೇರಣೆ ಕೊಡುವ ದಿನವಾದರೆ ಶ್ರೀದೇವಿ ಶಿಕ್ಷಣ ಸಂಸ್ಥೆಯ ದೊಡ್ಡ ಆಶಯ ಅನುಷ್ಠಾನವಾದಂತೆ ಎನ್ನುವುದು ನನ್ನ ಭಾವನೆ. ಅವರ ಆತ್ಮಕಥನದ ಪ್ರಭಾವ ನೀರಿನ ಚಿಲುಮೆಯಂತೆ ನಿರಂತರವಾಗಿ ಈ ಸಮಾಜದಲ್ಲಿದ್ದು ಯುವಜನಾಂಗವನ್ನು ಪ್ರೇರೇಪಿಸುತ್ತಿರುತ್ತದೆ.

ಡಾ.ಹುಲಿನಾಯ್ಕರ್ ಅವರು ತಮ್ಮ ಬದುಕನ್ನು ಪ್ರಜ್ಞಾಪೂರ್ವಕವಾಗಿ ಕಟ್ಟಿಕೊಂಡಿದ್ದಾರೆ. ಅವರು ಹುಟ್ಟಿ ಬೆಳೆದ ಪರಿಸರದಲ್ಲಿ ಯಾವುದೇ ವ್ಯಕ್ತಿ ಎಂ.ಬಿ.ಬಿ.ಎಸ್. ಮತ್ತು ಎಂ.ಎಸ್. ಮಾಡುವುದು ಮತ್ತು ದೂರದ ತುಮಕೂರಿನಲ್ಲಿ ರಾಷ್ಟ್ರೀಯ ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆ ಹಾಗೂ ಆಸ್ಪತ್ರೆ ಸ್ಥಾಪಿಸುವುದು ಅಷ್ಟು ಸುಲಭದ ಮಾತಲ್ಲ. ಯಾರಿಗೆ ತಮ್ಮ ಗುರಿ ನಿಚ್ಚಳವಾಗಿದ್ದು, ಅದಕ್ಕಾಗಿ ಹಗಲಿರುಳು ಸಾಧನೆ ಮಾಡುವ ಮನಸ್ಸಿರುತ್ತದೋ ಅಂತಹವರು ಮಾತ್ರ ಇದರಲ್ಲಿ ಯಶಸ್ವಿಯಾಗಬಹುದು. ಇದರಲ್ಲಿ ಡಾ.ಹುಲಿನಾಯ್ಕರ್ ಅವರು ಸಂಪೂರ್ಣವಾಗಿ ಯಶಸ್ವಿಯಾಗಿರುವುದನ್ನು ಗಮನಿಸಬಹುದು.

ಡಾ.ಹುಲಿನಾಯ್ಕರ್ ಅವರಿಗೆ ಬಸವಣ್ಣನವರ ಆದರ್ಶದಲ್ಲಿ ನಂಬಿಕೆಯಿದೆ. ಕನಕದಾಸರಲ್ಲಿ ಭಕ್ತಿಯಿದೆ. ಸಂತಕವಿ ಕಬೀರದಾಸರ 'ದೋಹೆ'ಗಳು ಅವರ ಮೇಲೆ ಹೆಚ್ಚು ಪ್ರಭಾವ ಬೀರಿದೆ. ನವಲಗುಂದದ ಹುರುಕಡ್ಲಿ ಅಜ್ಜ ಸೇರಿದಂತೆ ಅನೇಕ ಅವಧೂತರನ್ನು ಅನುಸರಿಸಿ ತಮ್ಮ ವ್ಯಕ್ತಿತ್ವದಲ್ಲಿ ಅಧ್ಯಾತ್ಮಕ್ಕೆ ಮಹತ್ವದ ಸ್ಥಾನ ಕೊಟ್ಟಿದ್ದಾರೆ. ಡಾ. ಹುಲಿನಾಯ್ಕರ್ ಅವರು ಯಶಸ್ವಿ ಸರ್ಜನ್ ಎನ್ನುವುದನ್ನು ಮರೆಯುವಂತಿಲ್ಲ. ಅವರ ರೋಗಿಗಳೇ ಅವರ ಆಸ್ತಿ.

ಅವರಲ್ಲಿ ಯಾವುದೇ ತತ್ವದ ಸಂಘರ್ಷಕ್ಕೆ ಅವಕಾಶವಿಲ್ಲ. ಮಹಾತ್ಮ ಗಾಂಧೀಜಿಯ ಅಹಿಂಸಾತತ್ವಕ್ಕೆ ಮನ ಸೋತಿದ್ದಾರೆ. ಮೂಲತ: ಋಜುಸ್ವಭಾವ ಅವರ ದೊಡ್ಡ ಆಂತರಿಕ ಶಕ್ತಿಯಾಗಿದೆ. ಹೀಗಾಗಿಯೇ ಅವರು 'ಹಸನ್ಮುಖಿ' 'ಅಜಾತಶತ್ರು' 'ಸರಳರು' 'ಮಾನವೀಯತೆ ಪ್ರತಿಬಿಂಬ' ಮೊದಲಾದ ವಿಶೇಷಣಗಳನ್ನು ಮಿತ್ರರಿಂದ ಪಡೆದಿದ್ದಾರೆ.

ಡಾ ಬಿ. ಆರ್. ಅಂಬೇಡ್ಕರ್ ಅವರ ಜೀವನ ಮತ್ತು ತತ್ವಗಳು ಸಮಾಜದಲ್ಲಿ ಅನ್ಯಾಯದ ವಿರುದ್ಧ ಹೋರಾಡುವವರಿಗೆ ಶಕ್ತಿ ನೀಡಿದೆ. ಹಿಂದೆ ಡಾ.ಅಂಬೇಡ್ಕರ್ ಅವರನ್ನು ವಿರೋಧಿಸುತ್ತಿದ್ದವರು, ಇಂದು ಅವರು ನೀಡಿದ ಸಂವಿಧಾನದ ಬಲದಿಂದಲೇ ತಮ್ಮ ಹಕ್ಕನ್ನು ಸ್ಥಾಪಿಸಿಕೊಳ್ಳುತ್ತಿದ್ದಾರೆ. ಅವರ ಕಾರ್ಯಗಳು ಸಮಾಜದಲ್ಲಿನ ದೀನದಲಿತರು ಮತ್ತು ಹಿಂದುಳಿದ ವರ್ಗಗಳಿಗೆ ಸಾಕಷ್ಟು ರಕ್ಷಣೆ ನೀಡಿದೆ. ಅದರಂತೆ ಡಾ. ಹುಲಿನಾಯ್ಕರ್ ಅವರು ಪ್ರಾರಂಭಿಸಿರುವ ಸಾಮಾಜಿಕ, ಶೈಕ್ಷಣಿಕ ಮತ್ತು ಸಮಾಜದ ವ್ಯಕ್ತಿಗಳ ಆರೋಗ್ಯ ರಕ್ಷಣಾ ಕಾರ್ಯವು ನಿರಂತರವಾಗಿ ಮುಂದುವರಿಯುತ್ತದೆ. ಅದರಿಂದ ಮುಂದಿನ ದಿನಗಳಲ್ಲಿ ಮತ್ತಷ್ಟು ಜನರು ಅದರ ಪ್ರಯೋಜನ ಪಡೆಯುತ್ತಾರೆ ಎನ್ನುವ ನಂಬಿಕೆ ನನ್ನಲ್ಲಿದೆ. ಡಾ. ಹುಲಿನಾಯ್ಕರ್ ಅವರ ಕ್ರಿಯಾಶೀಲ ಕಾಯಕ ಮನೋಧರ್ಮದ ಪ್ರಯೋಜನವನ್ನು ಇಂದಿನ ಸಮಾಜ ಮತ್ತು ಮುಂದಿನ ಪೀಳಿಗೆ ಪಡೆದುಕೊಳ್ಳುತ್ತದೆ ಎನ್ನುವುದರಲ್ಲಿ ಯಾವುದೇ ಸಂಶಯವಿಲ್ಲ.

ಡಾ. ಹುಲಿನಾಯ್ಕರ್ ಅವರ ಬದುಕಿನಲ್ಲಿ ಮುಂದಿನ ಪೀಳಿಗೆಯ ಜನರಿಗೆ ಸ್ಫೂರ್ತಿ ನೀಡುವ ಅನೇಕ ವಿಚಾರಗಳಿವೆ. ಡಾ.ಹುಲಿನಾಯ್ಕರ್ ಅವರು ತಮ್ಮ ಸಾಧನೆಯ ಕೀರ್ತಿಯನ್ನು ಎಲ್ಲರಿಗೂ ಹಂಚುವ ಉದಾರತೆಯನ್ನು ತೋರಿಸಿದ್ದಾರೆ. ಅವರ ಬದುಕಿನ ಮೇಲೆ ಅತಿ ಹೆಚ್ಚು ಪ್ರಭಾವ ಬೀರಿರುವ ಶ್ರೀಮತಿ ಶಾಂತಾದುರ್ಗಾದೇವಿ ಹುಲಿನಾಯ್ಕರ್ ಅವರನ್ನು ಮರೆಯುವಂತಿಲ್ಲ. ಇಬ್ಬರೂ ಏಕ ಮನಸ್ಸಿನಿಂದ ಕೆಲಸ ಮಾಡಿದ ಕಾರಣ ಸಮಾಜಕ್ಕೆ ಅಮೂಲ್ಯ ಕೊಡುಗೆಯನ್ನು ಇವರಿಂದ ಸಂದಾಯವಾಗಿದೆ. ನಮ್ಮ ಪೀಳಿಗೆಗೆ ಅದರಲ್ಲಿ ಯುವಜನಾಂಗಕ್ಕೆ ಇಂತಹ ಸಾಧಕರ ವಿಚಾರ ಗೊತ್ತಿಲ್ಲ. ಅಂತಹವರನ್ನು ಗುರುತಿಸದ ಕಾರಣ ನಮಗೆ ಆದರ್ಶ ವ್ಯಕ್ತಿಗಳ ಕೊರತೆಯಿದೆ. ಸ್ವಾಮಿ ವಿವೇಕಾನಂದ ಹೇಳಿದಂತೆ 'ಬದುಕಿನಲ್ಲಿ ಆದರ್ಶವ್ಯಕ್ತಿಗಳಿಲ್ಲದಿದ್ದರೆ ದಾರಿ ಗೊತ್ತಿಲ್ಲದೆ ದಟ್ಟ ಅರಣ್ಯದಲ್ಲಿ ಪ್ರಯಾಣ ಮಾಡಿದಂತೆ ಆಗುತ್ತದೆ.'

### ನಾವು ಪ್ರೇರಣಾ ದಿನವನ್ನಾಗಿ ಏಕೆ ಆಚರಿಸಬೇಕು ಎಂಬ ಪ್ರಶ್ನೆಗೆ ಹಿಂದಿರುಗೋಣ...

ದೇವರು ಸೃಷ್ಟಿಕರ್ತ, ನಿರ್ವಾಹಕ ಮತ್ತು ವಿಧ್ವಂಸಕ. ಅವನು ನಮ್ಮನ್ನು ಆಶೀರ್ವದಿಸಲು ಮತ್ತು ನಮಗೆ ಶಕ್ತಿ ನೀಡಲು ಮಾತ್ರ ಅಸ್ತಿತ್ವದಲ್ಲಿರುತ್ತಾನೆ. ಅವನು ಎಂದಿಗೂ ಸ್ಫೂರ್ತಿಯ ಮೂಲವಾಗಲು ಸಾಧ್ಯವಿಲ್ಲ. ಆದರೆ ತತ್ವಜ್ಞಾನಿಗಳು, ದಾರ್ಶನಿಕರು, ಮಹಾನ್ ವ್ಯಕ್ತಿಗಳು ಮತ್ತು ಸಾಧಕರು ತಮ್ಮ ಜೀವನ, ತತ್ವಗಳು, ಬೋಧನೆಗಳು ಮತ್ತು ಕೆಲಸದ ಮೂಲಕ ಸಮಾಜದ ಆರ್ಥಿಕ ಮತ್ತು ಸಾಮಾಜಿಕ ಉನ್ನತೀಕರಣಕ್ಕೆ ಕಾರಣರಾಗುತ್ತಾರೆ. ಅವರಲ್ಲಿ ಕೆಲವರು ಶೋಷಿತವರ್ಗಗಳ ಏಳಿಗೆಗೆ ಕೆಲಸ ಮಾಡುತ್ತಾರೆ. ಅವರುಗಳು ನಮಗೆ ಸ್ಫೂರ್ತಿ ಕೊಡಬಲ್ಲರು. ಅಂತಹವನ್ನು ನಾವು ಹುಡುಕಿಕೊಳ್ಳಬೇಕು. ಅವರು ಹಾಕಿದ ಅಂತಹ ಮಾರ್ಗದಲ್ಲಿ ನಡೆಯಬೇಕು. ಇದರಿಂದ ಮನುಕುಲಕ್ಕೆ ಪ್ರಯೋಜನ ದೊರೆಯುತ್ತದೆ., ನಮ್ಮಲ್ಲಿ ದೃಢ ವಿಶ್ವಾಸ ಮತ್ತು ಸತತ ಪ್ರಯತ್ನವಿದ್ದರೆ ದೇವರ ಆಶೀರ್ವಾದವನ್ನು ಬೇಡುವುದು ಸುಲಭವೆನಿಸುತ್ತದೆ. ಮಹಾನ್ ದಾರ್ಶನಿಕರು ಹಾಗೂ ಅವಧೂತರನ್ನು ಅನುಸರಿಸುವುದು ಕಷ್ಟ. ಅವರ ಉಪದೇಶದಂತೆ ನಡೆಯುವುದು ಅಸಾಧ್ಯವೆಂದು ಭಾವಿಸಿ ಅವರನ್ನು ದೇವರನ್ನಾಗಿಸಿದ್ದೇವೆ.

ಇಂದು ಯುವಜನಾಂಗಕ್ಕೆ ನೂರಾರು ದೇವರುಗಳ ಅಗತ್ಯವಿಲ್ಲ. ನಮ್ಮ ಬದುಕಿಗೆ ಪ್ರೇರಣೆ ದೊರೆಯುವ ಡಾ ಎಂ. ಆರ್. ಹುಲಿನಾಯ್ಕರ್ ಅವರಂತಹ ವ್ಯಕ್ತಿತ್ವಗಳೇ ಸಾಕು. ಅವರ ಬದುಕಿನ ತತ್ವಗಳನ್ನು ಶ್ರದ್ಧೆಯಿಂದ ಅನುಸರಿಸಿದರೆ ನಾವು ವಿಧಿ ಬರೆದ ಭವಿಷ್ಯವನ್ನೇ ಬದಲಾಯಿಸಬಹುದು. ನಮಗೆ ಪೂಜಾ ವಿಧಿವಿಧಾನಗಳಿಗಿಂತ ಪ್ರೇರಣೆ ನೀಡುವ ಸಾಧಕರನ್ನು ಅಂತಃಕರಣಪೂರ್ವಕವಾಗಿ ಪ್ರೀತಿಸಬೇಕು, ಅವರನ್ನು ಅನುಸರಿಸಬೇಕು.

ಡಾ ಎಂ. ಆರ್. ಹುಲಿನಾಯ್ಕರ್ ಅವರು ತಮ್ಮ ಜೀವನ ಮತ್ತು ಕೃತಿಗಳ ಮೂಲಕ ಭವಿಷ್ಯವನ್ನು ಬದಲಾಯಿಸ ಬಯಸುವ ಇಂದಿನ ಯುವಜನಾಂಗಕ್ಕೆ ಸ್ಫೂರ್ತಿಯ ಸೆಲೆಯಾಗಿದ್ದಾರೆ. ಅವರ ಬದುಕು ಮತ್ತು ಸಾಧನೆಯಿಂದ ಯುವಜನಾಂಗ ಪ್ರೇರಣೆ ಮತ್ತು ಸ್ಫೂರ್ತಿ ಪಡೆಯಲಿ ಎಂದು ಅವರ ಜನ್ಮದಿನವನ್ನು (ಜನವರಿ 16) "ಪ್ರೇರಣಾ ದಿನ"ವನ್ನಾಗಿ ಆಚರಿಸಲು ಸಂಕಲ್ಪ ಮಾಡಿದ್ದೇವೆ.

■ ಕನ್ನಡಕ್ಕೆ: ಬಿ.ಎಂ.ಸುನೀತಾ

ಡಾ.ನಾರಾಯಣ ಹುಲ್ಸೆ ಅವರ ಇಂಗ್ಲಿಷ್ ಭಾಷೆಯ ಕೃತಿ

# Joint Repalacements - A Patient`s Hand Book

ಪರಿಚಯ ವಿಶ್ಲೇಷಣೆ

## ಕೀಲುಗಳ ಮರುಜೋಡಣೆ ಮತ್ತು ಚಿಕಿತ್ಸಾನಂತರದ ನಿರ್ವಹಣೆ: ಒಂದು ಕೈಪಿಡಿ

**ಲೇಖಕರು**

ಬೆಂಗಳೂರಿನ ಬನ್ನೇರುಘಟ್ಟದ ಫೋರ್ಟಿಸ್ ಆಸ್ಪತ್ರೆಯ ಆರ್ಥೋಪಿಡಿಕ್ ಸರ್ಜರಿ ವಿಭಾಗದ ನಿರ್ದೇಶಕರಾಗಿರುವ ಡಾ. ನಾರಾಯಣ ಹುಲ್ಸೆ ಅವರು ಕೀಲು, ಮಂಡಿಚಿಪ್ಪು, ವಸ್ತಿ–ಕುಹರ(ಪೆಲ್ವಿಸ್)–ಇವುಗಳ ಶಸ್ತ್ರಚಿಕಿತ್ಸೆಯಲ್ಲಿ ಅತ್ಯುತ್ತಮ ಪರಿಣತಿಯನ್ನು ಪಡೆದಿದ್ದಾರೆ. ಜೊತೆಗೆ ವೈದ್ಯಕೀಯ ಗ್ರಂಥಗಳ ಲೇಖಕರು, ಸಂಶೋಧಕರು ಮತ್ತು ಆರ್ಥೋ ವೈದ್ಯಕೀಯ ವಿಷಯದ ಪತ್ರಿಕೆಯ ಸಂಪಾದಕರು. ಕೀಲು ಬದಲಾವಣೆ, ಮಂಡಿಚಿಪ್ಪು, ಮತ್ತು ಸೊಂಟಕ್ಕೆ ಹೊಂದಿಕೊಂಡಂತಿರುವ ಸಾಕೆಟ್ ಹಾಗೂ ಪೃಷ್ಠಭಾಗದ ಶಸ್ತ್ರಚಿಕಿತ್ಸೆಯಲ್ಲಿ ನಿಷ್ಣಾತರು. ವಿಶ್ವದ ಪ್ರಸಿದ್ಧ ಆಸ್ಪತ್ರೆಗಳಲ್ಲಿ ಶಸ್ತ್ರಚಿಕಿತ್ಸಕರಾಗಿ ಮತ್ತು ಆರ್ಥೋಗೆ ಸಂಬಂಧಪಟ್ಟಂತೆ ಚಿಕಿತ್ಸಾನುಭವದಿಂದಾಗಿ ಡಾ.ನಾರಾಯಣ ಹುಲ್ಸೆ ಅವರು ಆರ್ಥೋಕ್ಷೇತ್ರದ ತಜ್ಞರೆಂದು ಖ್ಯಾತರಾಗಿದ್ದಾರೆ.

ಡಾ.ನಾರಾಯಣ ಹುಲ್ಸೆ ಅವರು ಬೆಂಗಳೂರಿನ ಸರ್ಕಾರಿ ವೈದ್ಯಕೀಯ ಕಾಲೇಜಿನಲ್ಲಿ ಎಂ.ಬಿ.ಬಿ.ಎಸ್. ಮತ್ತು ಮದ್ರಾಸ್ ಮೆಡಿಕಲ್ ಕಾಲೇಜಿನಲ್ಲಿ ಆರ್ಥೋ ವಿಚಾರದಲ್ಲಿ ಚಿನ್ನದ ಪದಕದೊಂದಿಗೆ ಸ್ನಾತಕೋತ್ತರ ಪದವಿಗಳನ್ನು ಪಡೆದಿದ್ದಾರೆ.

ಹೆಚ್ಚಿನ ವಿದ್ಯಾರ್ಹತೆ ಮತ್ತು ಪ್ರಾಯೋಗಿಕ ಅನುಭವ ಪಡೆಯಲು ಇಂಗ್ಲೆಂಡ್‌ಗೆ ಹೋಗಿ ಜನರಲ್ ಸರ್ಜರಿಯಲ್ಲಿ ಎಂ.ಆರ್.ಸಿ.ಎಸ್. ಮತ್ತು Trauma & Orthoದಲ್ಲಿ ಎಫ್.ಆರ್.ಸಿ.ಎಸ್. ಪದವಿಗಳನ್ನು ಗಳಿಸಿಕೊಂಡಿರುತ್ತಾರೆ. ಶ್ರೀಯುತರು ಇಂಗ್ಲೆಂಡ್‌ನ ಎಡಿನ್‌ಬರೋನ ಪ್ರತಿಷ್ಠಿತ ರಾಯಲ್ ಕಾಲೇಜಿನ ವಿದ್ಯಾರ್ಥಿ. ಸೆಂಟ್ ಮಿಚಿಕಲ್ ಆಸ್ಪತ್ರೆಯಿಂದ ಕೀಲು ಬದಲಾವಣೆ ಮತ್ತು ಸೆಂಟ್ ಜಾರ್ಜ್ ಆಸ್ಪತ್ರೆಯಿಂದ ಸೊಂಟಕ್ಕೆ ಹೊಂದಿಕೊಂಡಂತಿರುವ ಸಾಕೆಟ್ ಹಾಗೂ ಪೃಷ್ಠಭಾಗದ ಶಸ್ತ್ರಚಿಕಿತ್ಸೆಗಳಲ್ಲಿ ತರಬೇತಿ ಪಡೆದಿರುತ್ತಾರೆ.

ಡಾ.ನಾರಾಯಣ ಹುಲ್ಸೆ ಅವರು ಈ ತನಕ ಅನೇಕ ಕೀಲು ಮತ್ತು ಮಂಡಿಚಿಪ್ಪಿನ ಶಸ್ತ್ರಚಿಕಿತ್ಸೆಗಳನ್ನು ಮಾಡಿ ಯಶಸ್ವಿ ಶಸ್ತ್ರಚಿಕಿತ್ಸಕರು ಎನ್ನುವ ಹೆಗ್ಗಳಿಕೆ ಪಡೆದಿದ್ದಾರೆ. ಕೀಲು ಬದಲಾವಣೆಯ ಶಸ್ತ್ರಚಿಕಿತ್ಸೆಯ ಪ್ರಾತ್ಯಕ್ಷಿಕೆಯನ್ನು ನೀಡಿದ್ದಾರೆ. ಆರ್ಥೋ ವಿಷಯಕ್ಕೆ ಸಂಬಂಧಪಟ್ಟ ಅನೇಕ ಪತ್ರಿಕೆಗಳಿಗೆ ಸಂಶೋಧನಾ ಲೇಖನ ಬರೆದಿದ್ದಾರೆ. ವಿಶ್ವದ ಅನೇಕ ಭಾಗಗಳಲ್ಲಿ ಕೀಲು ಬದಲಾವಣೆ ಕುರಿತು ತಜ್ಞ ಉಪನ್ಯಾಸಗಳನ್ನು ನೀಡಿದ್ದಾರೆ. ಆರ್ಥೋ ಪಠ್ಯಪುಸ್ತಕಗಳಿಗೆ ಕೆಲವು ಅಧ್ಯಾಯಗಳನ್ನು ಬರೆದು ಕೊಟ್ಟಿದ್ದಾರೆ. ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ವೈದ್ಯಕೀಯ ಪತ್ರಿಕೆಗಳ ಸಂಪಾದಕ ಮಂಡಲಿಯಲ್ಲಿದ್ದು, ಅನೇಕ ಲೇಖನಗಳನ್ನು ಪರಿಷ್ಕರಣೆ ಮಾಡಿಕೊಟ್ಟಿದ್ದಾರೆ



ಇವರ ಸೇವೆಯಲ್ಲಿ ಮುಖ್ಯವಾಗಿರುವ ಅಂಶಗಳಲ್ಲಿ ಕೀಲು ನೋವಿನಿಂದ ಬಳಲುತ್ತಿರುವವರ ಮನಸ್ಸಿನಲ್ಲಿರುವ ಶಂಕೆ ಮತ್ತು ಭಯಗಳನ್ನು ನಿವಾರಿಸುವುದು, ಮೂಢನಂಬಿಕೆಯಿಂದ ನಿವಾರಣೆಗಾಗಿ ಅನರ್ಹರ ಬಳಿ ಪ್ರಯತ್ನಿಸಿ ರೋಗವನ್ನು ಮತ್ತಷ್ಟು ಹದಗೆಡಿಸಿಕೊಳ್ಳುವಂತಹವರಿಗೆ ಸರಿಯಾದ ಮಾರ್ಗದರ್ಶನ ಮಾಡುವುದು ಸೇರಿವೆ.

ದೇಹದಲ್ಲಿ ಎರಡು ಅಥವಾ ಹೆಚ್ಚು ಮೂಳೆಗಳು ಪರಸ್ಪರ ಸೇರುವ ಭಾಗಗಳನ್ನು ನಾವು ಕೀಲುಗಳು ಎನ್ನುತ್ತೇವೆ – ಉದಾಹರಣೆಗೆ ಭುಜ, ಮಂಡಿ, ಸೊಂಟ, ಬೆರಳುಗಳು, ಪಾದದ ಹರಡು ಮೊದಲಾದ ಎಡೆಗಳಲ್ಲಿರುವ ಮೂಳೆಗಳ ಸೇರುವಿಕೆ. ನಾನಾ ಕಾರಣಗಳಿಂದ ಇಂತಹ ಸಂಧಿಪ್ರದೇಶಗಳಲ್ಲಿ ನೋವು ಉಂಟಾಗಿ ಉಲ್ಬಣಗೊಂಡು ವ್ಯಕ್ತಿಯು ತನ್ನ ದೈನಂದಿನ ಚಟುವಟಿಕೆಗಳನ್ನು ನಡೆಸಲು ಬಹಳ ತ್ರಾಸಪಡಬೇಕಾದ ಸಂಭವವಿರುತ್ತವೆ. ಇಂತಹ ಪರಿಸ್ಥಿತಿಗೆ ಮೂಳೆಗಳ ನಡುವೆ ಉಂಟಾಗಬಹುದಾದ ಘರ್ಷಣೆ, ಅನಿರೀಕ್ಷಿತವಾಗಿ ಸಂಭವಿಸುವ ಅಪಘಾತಗಳು, ಮೊದಲಾದವುಗಳು ಕಾರಣವಾಗಿದ್ದಿರಬಹುದು. ಇಂತಹ ಸಂಧಿವಾತಗಳಿಂದ ಕೆಲವೊಮ್ಮೆ ಸಂಬಂಧಪಟ್ಟ ಅಂಗಗಳು ವಕ್ರವಾಗುವುದೂ ಉಂಟು. ಉದಾಹರಣೆಗೆ, ಕಾಲುಗಳ ಮಧ್ಯಭಾಗವು ಹೊರಕ್ಕೆ ಯಾ ಒಳಕ್ಕೆ ಬಾಗಿ ವಕ್ರವಾಗಬಹುದು, ಕೈ ಅಥವಾ ಕಾಲಿನ ಬೆರಳುಗಳು ಸೊಟ್ಟಗಾಗಬಹುದು, ಇದರಿಂದ ಕುಳಿತುಕೊಳ್ಳುವುದು, ಏಳುವುದು ಹಾಗೂ ಚಲಿಸುವುದು ತ್ರಾಸದಾಯಕವಾಗುತ್ತದೆ. ಆ ಎಡೆಗಳಲ್ಲಿ ಉರಿಯೂತದ ಪರಿಣಾಮವಾಗಿ ತೀಕ್ಷ್ಣವಾದ ನೋವು ಕಾಣಿಸಿಕೊಂಡು ತೀವ್ರವಾಗಬಹುದು. ಸಕಾಲದಲ್ಲಿ ಚಿಕಿತ್ಸೆಮಾಡಿಸಿ ಕೊಳ್ಳದಿದ್ದರೆ ಸಮಸ್ಯೆ ಹೆಚ್ಚಾಗುತ್ತಾ ಹೋಗುತ್ತದೆ.

ಇಂತಹ ಪರಿಸ್ಥಿತಿಯಲ್ಲಿ ರೋಗಿಯು ತೆಗೆದುಕೊಳ್ಳಬೇಕಾದ ಎಚ್ಚರಿಕೆಯ ಕ್ರಮಗಳನ್ನು, ವೈದ್ಯರು ಮಾಡುವ ವೈದ್ಯೋಪಚಾರಗಳನ್ನು ಈ ಕೈಪಿಡಿಯಲ್ಲಿ ವಿವರವಾಗಿ ಮತ್ತು ಸಾಮಾನ್ಯರಿಗೂ ಅರ್ಥವಾಗುವ ರೀತಿಯಲ್ಲಿ ನೀಡಲಾಗಿದೆ.

**ಕೀಲುಗಳ ಮರುಜೋಡಣೆ**

ಇದು ತೊಂದರೆಗೊಳಗಾಗಿರುವ ಭಾಗದ ಕೀಲುಗಳನ್ನು ತೆಗೆದು, ಕೃತಕ ಪದಾರ್ಥಗಳಿಂದ ತಯಾರಿಸಲ್ಪಟ್ಟ ಕೀಲುಗಳನ್ನು ಅಳವಡಿಸುವ ಶಸ್ತ್ರಚಿಕಿತ್ಸೆಯ ಕ್ರಿಯೆಯಾಗಿರುತ್ತದೆ. ಇದರಿಂದ ಹಲವು ವರ್ಷಗಳ ನೋವು ನಿವಾರಣೆಯಾಗುವುದಲ್ಲದೆ ವಕ್ರವಾಗಿರುವ ದೇಹದ ಭಾಗಗಳು (ಉದಾ. ಕಾಲು, ಕೈ ಯಾ ಕಾಲಿನ ಬೆರಳುಗಳು) ಸಹಜಸ್ಥಿತಿಗೆ ಮರಳುತ್ತವೆ.

ಡಾ. ನಾರಾಯಣ್ ಹುಲ್ಸೆಯವರು ಸಂಧಿವಾತದ ಕಾರಣಗಳನ್ನು ತಿಳಿಸುವುದಲ್ಲದೆ, ಅಂತಹ ಪರಿಸ್ಥಿತಿ ಬಾರದ ಹಾಗೆ ನೋಡಿಕೊಳ್ಳಲು ಯಾವರೀತಿಯ ಮುನ್ನೆಚ್ಚರಿಕೆಗಳನ್ನು ತೆಗೆದುಕೊಳ್ಳಬೇಕು ಎಂಬುದನ್ನು ವಿವರಿಸುತ್ತಾರೆ. ಅವರು ನೀಡುವ ಸಲಹೆಗಳಲ್ಲಿ ಕೆಲವು, ದೇಹದ ತೂಕ ಹೆಚ್ಚಾಗದಂತೆ ನೋಡಿಕೊಳ್ಳುವುದು. ಸೂಕ್ತ ವ್ಯಾಯಾಮವನ್ನು ದಿನನಿತ್ಯದ ಜೀವನಕ್ರಮದಲ್ಲಿ ಅಳವಡಿಸಿಕೊಳ್ಳುವುದು, ಕೆಲಸಮಾಡುವಾಗ ಉಂಟಾಗಬಹುದಾದ ಅಪಘಾತಗಳ ಬಗೆಗೆ ಅರಿವನ್ನು ಬೆಳಸಿಕೊಳ್ಳುವುದು, ರಸ್ತೆ ಅಪಘಾತಗಳು ಸಂಭವಿಸದಂತೆ ನೋಡಿಕೊಳ್ಳುವುದು, ಹಾಗೂ ಮುನ್ನೆಚ್ಚರಿಕೆ ವಹಿಸಿದ ಅನಂತರವೂ ಅಕಸ್ಮಾತ್ತಾಗಿ ಅಪಘಾತಗಳು ಸಂಭವಿಸಿದರೆ, ಸಕಾಲದಲ್ಲಿ ತೆಗೆದುಕೊಳ್ಳಬೇಕಾದ ಕ್ರಮಗಳು, ಇತ್ಯಾದಿಗಳು ಸೇರಿವೆ.


**ಸಾಮಾನ್ಯ ಜನರ ಮನಸ್ಸಿನಲ್ಲಿ ಇರುವ ಅನುಮಾನಗಳನ್ನು ನಿವಾರಿಸಲು, ಡಾ. ನಾರಾಯಣ ಹುಲಸೆ ಅವರು ಹಲವಾರು ವಾಸ್ತವ ಪ್ರಸಂಗಗಳನ್ನು ತಮ್ಮ ಕೈಪಿಡಿಯಲ್ಲಿ ನಿರೂಪಿಸಿದ್ದಾರೆ. ಅವುಗಳಲ್ಲಿ ಕೆಲವು ಹೀಗಿವೆ:**

- ತನ್ನ ಎತ್ತರಕ್ಕೆ ಇರಬೇಕಾದುದಕ್ಕಿಂದ ಅತಿ ಹೆಚ್ಚಿನ ತೂಕವನ್ನು ಹೊಂದಿದ್ದ ಮಹಿಳೆಯೊಬ್ಬರು ಬಂದು ಶಸ್ತ್ರಚಿಕಿತ್ಸೆಯನ್ನು ಮಾಡಿಸಿಕೊಂಡು ತನ್ನ ಎರಡೂ ಮಂಡಿಗಳ ಕೀಲುಗಳ ಮರುಜೋಡಣೆ ಮಾಡಿಸಿಕೊಂಡರು. ಶಸ್ತ್ರಚಿಕಿತ್ಸೆಯು ಯಶಸ್ವಿಯಾಗಿ, ಶೀಘ್ರವಾಗಿ ಗುಣಮುಖರಾದರು, ತದನಂತರ ತಮ್ಮ ತೂಕವನ್ನು ಕಡಮೆಮಾಡಿಕೊಂಡರು.
- ಮತ್ತೊಂದು ಪ್ರಸಂಗದಲ್ಲಿ, ನಿವೃತ್ತ ಸೇನಾಧಿಕಾರಿಯೊಬ್ಬರಿಗೆ ಅವರ 90ನೆಯ ವಯಸ್ಸಿನಲ್ಲಿ ಸಂಭವಿಸಿದ ಅಪಘಾತವೊಂದರಲ್ಲಿ ಅವರ ಎಡಮಂಡಿಯ ಕೀಲಿಗೆ ಪೆಟ್ಟುಬಿದ್ದಿತ್ತು. ಆ ವಯಸ್ಸಿನಲ್ಲಿ ಅವರು ಧೈರ್ಯದಿಂದ ಶಸ್ತ್ರಚಿಕಿತ್ಸೆಯನ್ನು ಮಾಡಿಸಿಕೊಳ್ಳಲು ಮುಂದೆ ಬಂದರು. ಅವರಿಗೆ ಮಾಡಿದ ಶಸ್ತ್ರಚಿಕಿತ್ಸೆಯು ಸಂಪೂರ್ಣವಾಗಿ ಫಲಪ್ರದವಾಗಿ, ಎಲ್ಲರೂ ಆಶ್ಚರ್ಯಪಡುವಷ್ಟು ಶೀಘ್ರವಾಗಿ ಅವರು ಗುಣಮುಖರಾದರು ಮತ್ತು ತಮ್ಮ ಎಂದಿನ ಕೆಲಸಕಾರ್ಯಗಳಲ್ಲಿ ತೊಡಗಿಕೊಂಡರು.
- ಹಾಗೆಯೇ ಮೂಳೆಗಳ ವಿರೂಪತೆಯಿಂದಾಗಿ ಕಾಲುಗಳು ಹೊರಕ್ಕೆ ಬಿಲ್ಲಿನಂತೆ ಬಾಗಿದ್ದ 68 ವರ್ಷ ವಯಸ್ಸಿನ ಮಹಿಳೆಯೊಬ್ಬರು, ಮೊದಮೊದಲು ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳಲು ಹಿಂಜರಿಯುತ್ತಿದ್ದರೂ, ತಮ್ಮ ಮಗನ ಒತ್ತಾಯ ಹಾಗೂ ಆತ ನೀಡಿದ ಧೈರ್ಯದ ಮೇರೆಗೆ ಡಾ. ನಾರಾಯಣ ಹುಲ್ಸೆ ಅವರ ಬಳಿಗೆ ಬಂದರು. ಆಕೆಯ ಕಾಲಿಗೆ ಸ್ಟೆಮ್‌ಗಳನ್ನು ಅಳವಡಿಸಿದ ಮೂರು ತಿಂಗಳುಗಳಲ್ಲಿ ಆಕೆ ಮೊದಲಿನಂತೆ ತಮ್ಮ ಸಂಜೆಯ ವಾಯುವಿಹಾರವನ್ನು ಮತ್ತೆ ಪ್ರಾರಂಭಿಸಿದರು.
- ಮತ್ತೊಬ್ಬ ಮಹಿಳೆಯು ದುರದೃಷ್ಟದಿಂದ ರಸ್ತೆ ಅಪಘಾತಕ್ಕೆ ಈಡಾಗಿ, ಸೊಂಟದ ಬಲಗಡೆಯ ಮೂಳೆ ಹಾಗೂ ಬಲ ತೊಡೆಯ ಮೂಳೆ ಮುರಿತಕ್ಕೆ ಒಳಗಾಗಿದ್ದರು. ಆಕೆ ಬೇರೆಡೆಯಲ್ಲಿ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರೂ, ತಮ್ಮ ಮಾಮೂಲಿನ ಸ್ಥಿತಿಗೆ ಮರಳಿರಲಿಲ್ಲ. ಬದಲಿಗೆ, ಮೂಳೆ ಮುರಿದ ಸ್ಥಳದಲ್ಲಿ ಸೋಂಕು ತಗಲಿ ಪರಿಸ್ಥಿತಿ ಉಲ್ಬಣವಾಗಿ, ಆಕೆ ಡಾ. ನಾರಾಯಣ್ ಹುಲ್ಸೆ ಅವರ ಬಳಿಗೆ ಬಂದಾಗ ಆಕೆಯ ಪರಿಸ್ಥಿತಿ ಅಷ್ಟೇನೂ ಆಶಾದಾಯಕವಾಗಿರಲಿಲ್ಲ. ಜರ್ಜರಿತವಾಗಿದ್ದ ಭಾಗದ ಗಾಯವು ಮಾಗಿರಲಿಲ್ಲ. ಆಕೆಯ ಸೊಂಟ ಸರಿಯಾಗಿ ಕೆಲಸಮಾಡುವ ಸ್ಥಿತಿಯಲ್ಲಿರಲಿಲ್ಲ. ಆಕೆ ಹಾಸಿಗೆ ಹಿಡಿದಿದ್ದರು. ಆಕೆಗೆ ಚಿಕಿತ್ಸೆಮಾಡಿ ಉದ್ದನೆಯ ಸ್ಟೆಮ್ ಒಂದನ್ನು ಹಾಕಲಾಯಿತು. ಶಸ್ತ್ರಚಿಕಿತ್ಸೆಯ ಸಮಯದಲ್ಲಿ ರಕ್ತ ಹೆಪ್ಪುಗಟ್ಟಿ ತೊಂದರೆಯಾಗಿ ಶ್ವಾಸಕೋಶಕ್ಕೆ ರಕ್ತದ ಸರಬರಾಜು ನಿಂತುಹೋಗುವ ಪರಿಸ್ಥಿತಿ ಬಂದಿತ್ತು. ಆಗ ಅಲ್ಲಿದ್ದ ಅರಿವಳಿಕೆತಜ್ಞರು, ಹೃದಯರೋಗತಜ್ಞರು ಹಾಗೂ ಶ್ವಾಸಕೋಶರೋಗಗಳ ತಜ್ಞರ ಅತ್ಯುತ್ತಮ ಪ್ರಯತ್ನಗಳಿಂದಾಗಿ ಶಸ್ತ್ರಚಿಕಿತ್ಸೆಯು ಅದ್ಭುತ ರೀತಿಯಲ್ಲಿ ಯಶಸ್ವಿಯಾಯಿತು. ಹನ್ನೆರಡು ವಾರಗಳಲ್ಲಿ ಆಕೆ ತಮ್ಮ ಮೊದಲಿನ ದೈನಂದಿನ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವಷ್ಟರ ಮಟ್ಟಿಗೆ ಗುಣಮುಖರಾದರು.
- ಸಂಪೂರ್ಣವಾಗಿ ಮಂಡಿಚಿಪ್ಪಿನ ಮರುಜೋಡಣೆಗಳನ್ನು ಮುಂದೆ ಸೂಚಿಸಿರುವ ಮೂರು ಪರಿಸ್ಥಿತಿಗಳಲ್ಲಿ ಮಾತ್ರ ಕೈಗೆತ್ತಿಕೊಳ್ಳುತ್ತೇವೆ ಎಂದು ಡಾ. ನಾರಾಯಣ ಹುಲ್ಸೆ ಅವರು ಹೇಳುತ್ತಾರೆ:
  - ನೋವು ಮಂಡಿಯಲ್ಲಿ ತೀವ್ರವಾಗಿದ್ದಾಗ,
  - ದೈನಂದಿನ ಕೆಲಸಕಾರ್ಯಗಳ ನಿರ್ವಹಣೆಯಲ್ಲಿ ತೊಂದರೆಯಾದಾಗ,
  - ಬೇರೆ ಎಲ್ಲಾ ಮಾರ್ಗಗಳೂ ನೋವು ನಿವಾರಣೆಯಲ್ಲಿ ನಿಷ್ಫಲವಾದಾಗ.

**ಡಾ. ಹುಲ್ಸೆ ಅವರು ಹೇಳುವ ಇತರ ಅಂಶಗಳು ಹೀಗಿವೆ:**

ಕೀಲಿನ ಮರುಜೋಡನೆಗೆ ಪರ್ಯಾಯವಾಗಿ ಕೆಲವು ವಿಧಾನಗಳನ್ನು ಡಾ. ನಾರಾಯಣ್ ಹುಲಸೆ ಅವರು ಸೂಚಿಸುತ್ತಾರೆ. ಅವರು ಶಿಫಾರಸ್ಸು ಮಾಡುವ ವಿಧಾನಗಳಲ್ಲಿ ಕೆಲವು ಹೀಗಿವೆ. ತರುಣರು ಅಥವಾ ವಾತರೊಗವು ಆರಂಭದೆಸೆಯಲ್ಲಿರುವ ಇತರರು, ಅಥವಾ ಕೀಲಿನ ಮರಜೋಡಣೆ ಮಾಡಿಸಿಕೊಳ್ಳಲಾರದಂಹವರು ಏರೋಬಿಕ್ ವ್ಯಾಯಾಮಗಳು, ಯೋಗಾಭ್ಯಾಸ, ಹೀಲ್ ವೆಡ್ಜಸ್, ಬ್ರೇಸ್‌ಗಳು, ಸ್ಟೀರಾಯ್ಡ್ ಚುಚ್ಚುಮದ್ದುಗಳು, ಸ್ಟೀರಾಯ್ಡ್ ಇಲ್ಲದ ಹಾಗೂ ಉರಿಯೂತಗಳನ್ನು ತಡೆಯುವ ಕ್ರಿಯಾಶೀಲ ಪದಾರ್ಥಗಳನ್ನು ಬಳಸಬೇಕು. ಡಾ. ನಾರಾಯಣ ಹುಲ್ಸೆ ಅವರ ಪ್ರಕಾರ, ತರುಣರಲ್ಲಿ ಕಂಡುಬರುವ ಸಂಧಿವಾತ ರೋಗಗಳನ್ನು ಶಸ್ತ್ರಚಿಕಿತ್ಸೆಯಿಲ್ಲದೆ ಪರ್ಯಾಯ ಮಾರ್ಗಗಳಿಂದ ಗುಣಪಡಿಸಬಹುದು ಮತ್ತು ಮಧ್ಯವಯಸ್ಕರ ಕೆಲವು ಸಮಸ್ಯೆಗಳ ನಿವಾರಣೆಯಲ್ಲಿ ಪೂರ್ಣಪ್ರಮಾಣದ ಮರುಜೋಡಣೆಗೆ ಬದಲಾಗಿ ಭಾಗಶಃ ಶಸ್ತ್ರಚಿಕಿತ್ಸೆಯು ಫಲಪ್ರದವಾಗುತ್ತದೆ.

ಕೆಲವು ಪ್ರಸಂಗಗಳಲ್ಲಿ, ಶಸ್ತ್ರಚಿಕಿತ್ಸೆಯು ಎಲ್ಲಾ ದೃಷ್ಟಿಯಿಂದಲೂ ಸಮರ್ಪಕವಾಗಿ ನೆರವೇರಿದ್ದರೂ, ಸಂಬಂಧಪಟ್ಟ ವ್ಯಕ್ತಿಗಳು ಸಹಜಸ್ಥಿತಿಗೆ ಮರಳಲು ಮತ್ತು ತಮ್ಮ ಮೊದಲಿನ ದೈನಂದಿನ ಕೆಲಸಕಾರ್ಯಗಳಲ್ಲಿ ತೊಡಗಿಕೊಳ್ಳಲು ಹೆಚ್ಚಿನ ಸಮಯ ಹಿಡಿಯುತ್ತದೆ ಎಂದು ಡಾ. ನಾರಾಯಣ್ ಅವರು ಹೇಳುತ್ತಾರೆ. ಡಾಕ್ಟರ್ ಅವರ ಪ್ರಕಾರ ಈ ಕಾಲಾವಧಿಯು, ಆಯಾ ವ್ಯಕ್ತಿಯ ವಯಸ್ಸು, ದೇಹದ ತೂಕ, ತಾವು ಗುಣಮುಖರಾಗುತ್ತೇವೆ ಎಂಬ ವಿಷಯದಲ್ಲಿ ಅವರಿಗಿರುವ ಆತ್ಮವಿಶ್ವಾಸ ಮೊದಲಾದವುಗಳ ಮೇಲೆ ಅವಲಂಬಿತವಾಗಿರುತ್ತದೆ.




ಮಾಹಿತಿ ಅನುವಾದ ಮತ್ತು ನಿರೂಪಣೆ
ವಿ.ಕೃಷ್ಣ
ಮೊ. 9036857528
ಮಾರ್ಗದರ್ಶನ ಮತ್ತು ಸಲಹೆ
ಡಾ.ಎಂ.ಆರ್.ಹುಲಿನಾಯ್ಕರ್
ಜನರಲ್ ಸರ್ಜನ್

▶▶ 5ನೇ ಪುಟಕ್ಕೆ...

## ಮಂಗಳೂರಿನಲ್ಲಿ ಅಂತಾರಾಷ್ಟ್ರೀಯ ಫಿಜಿಯೋಥೆರಪಿ ಸಮ್ಮೇಳನ

# ಶ್ರೀದೇವಿ ಫಿಜಿಯೋಥೆರಪಿ ಕಾಲೇಜಿನ ಪ್ರಾಧ್ಯಾಪಕರಿಗೆ ಮನ್ನಣೆ

2021ರ ಫೆಬ್ರವರಿಯಿಂದ ಶ್ರೀಮತಿ ಜಿ. ವಿಜಯಲಕ್ಷ್ಮಿ ಅವರು ಶ್ರೀದೇವಿ ಫಿಸಿಯೋಥೆರಪಿ ಕಾಲೇಜಿನಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಕೆಲಸ ಮಾಡುತ್ತಿದ್ದಾರೆ. ಫಿಸಿಯೋಥೆರಪಿಯಲ್ಲಿ ಇವರ ಅಧ್ಯಯನ ವಿಷಯ ಹೃದಯ–ನಾಳ ಉಸಿರಾಟಕ್ಕೆ ಸೇರಿದ್ದಾಗಿದೆ. ಇವರು ಪುದುಚೆರಿಯ ಪಾಂಡಿಚೆರಿ ವಿಶ್ವವಿದ್ಯಾನಿಲಯದ ಮೂಲಕ ಎಂಟಿಪಿಜಿ ಮತ್ತು ಆರ್ಐಹೆಚ್ಎಸ್ ಪದವಿ ಪಡೆಯುತ್ತಾರೆ.

ಶ್ರೀಮತಿ ವಿಜಯಲಕ್ಷ್ಮೀ ಅವರು 2023ರ ಸೆಪ್ಟಂಬರ್ 8 ಮತ್ತು 9ರಂದು ಮಂಗಳೂರಿನಲ್ಲಿ ನಡೆದ ವಿಶ್ವ ಫಿಸಿಯೋಥೆರಪಿ ದಿನಾಚರಣೆಯ ಸಮ್ಮೇಳನದಲ್ಲಿ ಬಿಪಿಟಿ ಅಂತಿಮ ವರ್ಷದ 21 ವಿದ್ಯಾರ್ಥಿಗಳ ಜೊತೆ ಭಾಗವಹಿಸಿದ್ದರು. "ಫಿಸಿಯೋಥೆರಪಿಯ ಸಾಮರ್ಥ್ಯವನ್ನು ತೆರೆದಿಡುವ ಮಾರ್ಗಗಳು" ಎನ್ನುವುದು ಸಮ್ಮೇಳನ ಮುಖ್ಯ ಚರ್ಚೆಯ ವಸ್ತು.

"ಏರೋಬಿಕ್ ಮೇಲ್ವಿಚಾರಣೆ ಹಂತದಲ್ಲಿನ ಪರಿಣಾಮ ಮತ್ತು ಹದಿಹರೆಯದವರ ಅಧಿಕ ತೂಕದಲ್ಲಿನ ಏರೋಬಿಕ್ ಸಹನೆ ಮತ್ತು ಕಾಲಿನ ಕೆಳಭಾಗದ ಸ್ನಾಯು ಶಕ್ತಿ, ಮನುಷ್ಯನ ಆಂಥ್ರೋಪೊಮೆಟ್ರಿಕ್ ಕ್ರಮಗಳ ಮೇಲಿನ ವ್ಯಾಯಾಮ ತರಬೇತಿ" ಎಂಬ ವಿಷಯ ಕುರಿತು ಶ್ರೀಮತಿ ಜಿ.ವಿಜಯಲಕ್ಷ್ಮೀ ಪ್ರಬಂಧ ಮಂಡಿಸಿದ್ದರು. ಭೌತಚಿಕಿತ್ಸೆ ಅರ್ಥಾತ್ ಫಿಸಿಯೋಥೆರಪಿ ವೃತ್ತಿಯನ್ನು ಉತ್ತೇಜಿಸಲು ಮಾಡಿದ ಅರ್ಹ ಮತ್ತು ಮಹೋನ್ನತ ಕೆಲಸವೆಂದು ಇವರ ಪ್ರಬಂಧ ಗುರುತಿಸಲಾಗಿದೆ. ಪ್ರಬಂಧಕ್ಕೆ "ಮಹತ್ವದ ಕೊಡುಗೆಗಳ ಪ್ರಶಸ್ತಿ"ಯೂ ಲಭಿಸಿದೆ.




**ಪ್ರಬಂಧದ ಮಹತ್ವ:**

ಪ್ರಬಂಧದ ಅಧ್ಯಯನ ವಸ್ತು ಹದಿಹರೆಯದವರ ಅಧಿಕ ತೂಕಕ್ಕೆ ಸಂಬಂಧಿಸಿದೆ. ಕಾಲೇಜಿಗೆ ಹೋಗುವ ಯುವ ಸಮುದಾಯ ದೈಹಿಕ ಚಟುವಟಿಕೆಯ ಕೊರತೆ ಉಂಟಾಗಿ ಅಧಿಕ ತೂಕಕ್ಕೆ ಗುರಿಯಾಗುತ್ತಾರೆ. ಅದರಲ್ಲೂ ಭಾರತದಲ್ಲಿ ಇತ್ತೀಚಿಗೆ ನಡೆದ ಅಧ್ಯಯನ ಕಾಲೇಜುಗಳಿಗೆ ಹೋಗುವ ಯುವಕ–ಯುವತಿಯರು ಹೆಚ್ಚಿನ ತೂಕ ಹೊಂದಿದ್ದಾರೆ ಎನ್ನುತ್ತದೆ.

ಅಧಿಕ ತೂಕದ ಯುವಜನಾಂಗ ಏರೋಬಿಕ್ ಸಹಿಷ್ಣುತೆ ಮತ್ತು ಕಾಲು ಕೆಳಭಾಗದ ಸ್ನಾಯು ಶಕ್ತಿ, ಆಂಥ್ರೊಪೊಮೆಟ್ರಿಕ್ ಕ್ರಮಗಳ ಮೇಲಿನ ತರಬೇತಿ ಕಾರ್ಯಕ್ರಮ ಮತ್ತು ಏರೋಬಿಕ್‌ನ ಮೊದಲ ಹಂತದ ಪರಿಣಾಮಗಳನ್ನು ಕಂಡುಹಿಡಿಯುವುದು ಈ ಅಧ್ಯಯನದ ಗುರಿಯಾಗಿದೆ. ತಲಾ 30 ಮಂದಿಯಂತೆ ಎರಡು ಗುಂಪುಗಳನ್ನಾಗಿ ಮಾಡಿ ಒಟ್ಟು 60 ಸ್ಪರ್ಧಿಗಳ ಜೊತೆ ಮಾಡಿರುವ ಅಧ್ಯಯನ ಇದಾಗಿದೆ. ಜೊತೆಗೆ ಕುತ್ತಿಗೆಯ ಸುತ್ತಳತೆಯ ಮಾಪನ, ಬೊಜ್ಜಿನ ಅಳತೆ, ಎಂಆರ್‌ಸಿ ಗ್ರೇಡಿಂಗ್ ಮತ್ತು 6 ಎಂಡಬ್ಲ್ಯೂಟಿಯನ್ನು ಬಳಸಿ ಪರೀಕ್ಷೆಯ ಪೂರ್ವ ಮತ್ತು ನಂತರದ ಫಲಿತಾಂಶದ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಪೂರ್ವ ಪರೀಕ್ಷೆಯ ಕ್ರಮಗಳನ್ನು ವಾರದ ಆರಂಭದಲ್ಲಿ ತೆಗೆದುಕೊಂಡಿದ್ದು ಮತ್ತು ನಂತರದ ಪರೀಕ್ಷಾ ಕ್ರಮಗಳನ್ನು 8ನೇ ವಾರದಲ್ಲಿ ತೆಗೆದುಕೊಳ್ಳಲಾಗಿದೆ. ಅಧ್ಯಯನಕ್ಕೆ ರಚಿಸಿದ್ದ ಎರಡು ಗುಂಪುಗಳಲ್ಲಿ ಎ ಗುಂಪು (ನಿಯಂತ್ರಣ) ಪೂರ್ವ ಪರೀಕ್ಷಾ ಕ್ರಮಗಳ ನಂತರ ಏಕಾಂಗಿ ವ್ಯಾಯಾಮ ಭಂಗಿಗಳನ್ನು ಸಂಗ್ರಹಿಸಿತು. ಬಿ ಗುಂಪು (ಪ್ರಾಯೋಗಿಕ) ಸುಧಾರಿತ ಏರೋಬಿಕ್ ಸ್ಟೆಪ್ ಮತ್ತು ಏಕಾಂಗಿ ವ್ಯಾಯಾಮ ಭಂಗಿಗಳನ್ನು 8 ವಾರಗಳ ಅವಧಿಯ ತನಕ ಸಂಗ್ರಹಿಸಿತು. ಒಮ್ಮೆ ಪೂರ್ವ ಮತ್ತು ನಂತರದ ಕ್ರಮಗಳನ್ನು ಸಂಗ್ರಹಿಸಿದ ಬಳಿಕ ಅಂಕಿ–ಅಂಶಗಳನ್ನು ವಿಶ್ಲೇಷಣೆ ಮಾಡಲಾಯಿತು. ಅಂಕಿ–ಅಂಶಗಳ ವಿಶ್ಲೇಷಣೆ ಪ್ರಕಾರ, ಅತಿಯಾದ ತೂಕ ಹೊಂದಿರುವ ಹದಿಹರೆಯದವರ ಕುತ್ತಿಗೆಯ ಸುತ್ತಳತೆಯ ಮಾಪನ, ಕಿಬ್ಬೊಟ್ಟೆಯ ಬೊಜ್ಜು, ಕೆಳ ಅಂಗಗಳ ಸ್ನಾಯು ಶಕ್ತಿ ಮತ್ತು ಏರೋಬಿಕ್ ಸಹಿಷ್ಣುತೆಯನ್ನು ಕಡಿಮೆ ಮಾಡುತ್ತದೆ. ಅದರಲ್ಲೂ ಏಕಾಂಗಿ ವ್ಯಾಯಾಮ ಭಂಗಿಗಳಿಗಿಂತ ಸುಧಾರಿತ ಏರೋಬಿಕ್ ಸ್ಟೆಪ್ ಮತ್ತು ಸಾಂಘಿಕ ವ್ಯಾಯಾಮ ತರಬೇತಿಯು ಹೆಚ್ಚು ಪರಿಣಾಮಕಾರಿಯಾಗಿರುತ್ತದೆ.

**ಪ್ರಬಂಧದಿಂದಾದ ಲಾಭಗಳು:**

ಮೊದಲ ಮತ್ತು ಅತ್ಯಂತ ಮುಂದಿರುವ ಈ ಅಧ್ಯಯನದ ಕಾರಣದಿಂದ ಅತಿ ಹೆಚ್ಚು ತೂಕ ಹೊಂದಿರುವ ಯುವ ಹದಿಹರೆಯದವರು ಪರಿಣಾಮಕಾರಿ ವ್ಯಾಯಾಮವನ್ನು ಮಾಡುವ ಮೂಲಕ ಲಾಭ ಪಡೆಯಬಹುದು. ಇದರ ಜೊತೆಗೆ, ಅಧಿಕ ತೂಕ ಇರುವ ಹದಿಹರೆಯದವರು ಈ ಹಂತದಲ್ಲಿ ವ್ಯಾಯಾಮವನ್ನು ಪ್ರಾರಂಭಿಸಿದಲ್ಲಿ ತೂಕ ಇಳಿಕೆಯ ವೇಗ ಹೆಚ್ಚಾಗಿರುತ್ತದೆ.

ಈ ಅಧ್ಯಯನವು ಇಂದು ಅಧಿಕ ತೂಕದ ಯುವ ವಯಸ್ಸಿನವರು ಭವಿಷ್ಯದ ಸ್ಥೂಲಕಾಯದವರು ಎನ್ನುತ್ತದೆ. ಆದ್ದರಿಂದ ಅಧಿಕ ತೂಕದ ಯುವ ವಯಸ್ಸಿನವರು ಮುಂದೆ ಸ್ಥೂಲಕಾಯದ ವಯಸ್ಕರಾಗುವುದನ್ನು ನಿಯಂತ್ರಿಸಬೇಕಾಗಿದೆ. ಜೊತೆಗೆ ಸ್ಥೂಲಕಾಯತೆಗೆ ಸಂಬಂಧಿಸಿದ ಕಾಯಿಲೆಗಳನ್ನು ತಡೆಯಬೇಕಿದೆ.

ಅದರಲ್ಲೂ ಹೆಚ್ಚಿನ ತೂಕದ ಕಾರಣದಿಂದ ಯುವ ವಯಸ್ಸಿನವರು ತಮ್ಮ ಗೆಳೆಯರ ಜೊತೆ ಸ್ವಾಭಿಮಾನ ಕಡಿಮೆ ಮಾಡಿಕೊಳ್ಳುತ್ತಾರೆ, ತಿನ್ನುವ ಅಸ್ವಸ್ಥತೆಗಳು, ಮಧುಮೇಹ ಮೆಲ್ಲಿಟಸ್ ಮತ್ತು ಅಧಿಕ ರಕ್ತದೊತ್ತಡದಂತಹ ಕಾಯಿಲೆಗಳಿಂದ ಬಳಲುತ್ತಾರೆ. ಇಂತಹ ಸಂದರ್ಭದಲ್ಲಿ ಅವರು ಸರಿಯಾದ ಮೇಲ್ವಿಚಾರಣಾ ಏರೋಬಿಕ್ ಮತ್ತು ವ್ಯಾಯಾಮ ತರಬೇತಿ ಪಡೆದುಕೊಂಡರೆ ಈ ಎಲ್ಲಾ ಸಮಸ್ಯೆಗಳಿಂದ ದೂರವಾಗಿ ಆರೋಗ್ಯಕರ ಜೀವನ ನಡೆಸಬಹುದು.

ಈ ಅಧ್ಯಯನವು ಅಧಿಕ ತೂಕದ ಯುವ ಜನಾಂಗಕ್ಕೆ ಚಿಕಿತ್ಸೆ ನೀಡಲು ಫಿಸಿಯೋಥೆರಪಿಸ್ಟ್‌ಗಳಿಗೆ ಮಾರ್ಗದರ್ಶನ ನೀಡುತ್ತದೆ.

■ **ಕನ್ನಡಕ್ಕೆ: ಬಿ.ಎಂ.ಸುನೀತಾ**




## ಕೀಲುಗಳ ಮರುಜೋಡಣೆ ಮತ್ತು ಚಿಕಿತ್ಸಾನಂತರದ ನಿರ್ವಹಣೆ

◀◀ ...4ನೇ ಪುಟದಿಂದ

ಶಸ್ತ್ರಚಿಕಿತ್ಸೆಯ ಅನಂತರ ರೋಗಿಗಳು ಕೆಲವು ಸರಳ ವ್ಯಾಯಾಮಗಳನ್ನು ಕಡ್ಡಾಯವಾಗಿ ಮಾಡಬೇಕು, ಇವುಗಳಿಗೆ ಬೇರೆಯವರ ಮಾರ್ಗದರ್ಶನ, ಸಹಾಯ ಅಗತ್ಯವಿಲ್ಲ. ಅವುಗಳೆಂದರೆ, ಮಂಡಿಯಲ್ಲಿ ನೋವು ಹೆಚ್ಚಾಗಿ ಕಾಣಿಸಿಕೊಳ್ಳದ ಮಟ್ಟಿಗೆ ಮಾತ್ರ ನಿಯಮಿತವಾಗಿ ನಡೆಯುವುದು, ಆಗಾಗ್ಗೆ, ಸುಮಾರು 10–15 ಬಾರಿ ಕಾಲುಗಳನ್ನು ಅತ್ತಿತ್ತ ಆಡಿಸುವುದು, ಮಲಗಿಕೊಂಡು ಕಾಲನ್ನು ಮೇಲಕ್ಕೆ ಎತ್ತುವುದು, ಮಂಡಿಯನ್ನು ಮತ್ತೆಮತ್ತೆ ಮಡಿಸಿ ನಮ್ಯಗೊಳಿಸಿಕೊಳ್ಳುವುದು, ಇತ್ಯಾದಿ.

ಶಸ್ತ್ರಚಿಕಿತ್ಸೆಯ ಅನಂತರ ಸಾಮಾನ್ಯವಾಗಿ ಒಂದರಿಂದ ಕೆಲವು ವಾರಗಳಲ್ಲಿ ರೋಗಿಯು ಮೆಟ್ಟಿಲುಗಳನ್ನು ಹತ್ತಬಹುದು. ಹತ್ತುವಾಗ ಮತ್ತು ಇಳಿಯುವಾಗ ಅನುಸರಿಸಬೇಕಾದ ವಿಧಾನವನ್ನು ವೈದ್ಯರು ಹೇಳಿಕೊಡುತ್ತಾರೆ.

ಸ್ನಾನಮಾಡುವಾಗ ಕೆಳಕ್ಕೆ ಬೀಳದ ಹಾಗೆ ಬಹಳ ಎಚ್ಚರಿಕೆ ವಹಿಸಬೇಕು.

ಕಾರಿನಲ್ಲಿ ಕುಳಿತುಕೊಳ್ಳಬೇಕಾದಾಗ ಮುಂದಿನ ಸೀಟಿನಲ್ಲಿ ಕುಳಿತು, ಅನಂತರ ಕಾಲುಗಳನ್ನು ಒಳಕ್ಕೆ ತೆಗೆದುಕೊಳ್ಳಬೇಕು, ಹಾಗೂ ಇಳಿಯುವಾಗ ಕಾಲುಗಳನ್ನು ನಿಧಾನವಾಗಿ ಹೊರಕ್ಕೆ ಇಟ್ಟು ಅನಂತರ ಎಚ್ಚರಿಕೆಯಿಂದ ಹೊರಕ್ಕೆ ಬರಬೇಕು.

ಮಂಡಿಚಿಪ್ಪುಗಳ ಮರುಜೋಡಣೆ ಶೇ. 80ರಿಂದ 90ರವರೆಗಿನ ಪ್ರಕರಣಗಳಲ್ಲಿ ಸುಮಾರು 20 ವರ್ಷ ಬಾಳಿಕೆ ಬರುತ್ತವೆ. ಈ ಅವಧಿಯು ರೋಗಿಗಳ ಸ್ಥಿತಿಯ ಮೇಲೆಯೂ ಅವಲಂಬಿಸಿರುತ್ತದೆ, ಉದಾ. ಅವರ ವಯಸ್ಸು, ದೇಹದ ತೂಕ, ಇತರ ಕಾಯಿಲೆಗಳು, ಇತ್ಯಾದಿ.

ಉಳಿದ ಶಸ್ತ್ರಚಿಕಿತ್ಸೆಗಳಿಗಿಂತ ಮಂಡಿಚಿಪ್ಪಿನ ಶಸ್ತ್ರಚಿಕಿತ್ಸೆ ಅತ್ಯಂತ ಕ್ಷೇಮಕರವಾಗಿರುತ್ತದೆ. ವೈಫಲ್ಯದ ಸಾಧ್ಯತೆ ಬಹಳ ಕಡಮೆ. ಇಂತಹ ವೈಫಲ್ಯ ತಾಂತ್ರಿಕ ಕಾರಣಗಳಿಂದಾಗಿರದೆ ವ್ಯಕ್ತಿಗಳು ವೈದ್ಯರ ಸೂಚನೆಯನ್ನು ಪಾಲಿಸದಿರುವುದು, ಅವರ ಆರೋಗ್ಯಸ್ಥಿತಿ, ಇತ್ಯಾದಿ.

ಇಷ್ಟೆಲ್ಲ ಹೇಳಿದ ಮೇಲೆ ಪ್ರಾಥಮಿಕ ಹಂತದಲ್ಲಿ ಅಥವಾ ಅನಂತರ ಚಿಕಿತ್ಸೆ ಮಾಡಬೇಕಾದ ಸಂದರ್ಭದಲ್ಲಿ ಸಾಮಾನ್ಯವಾಗಿ ವಿವಿಧ ದೇಶಗಳಲ್ಲಿ ಹಾಗೂ ಭಾರತದಲ್ಲಿ ತಗಲುವ ಖರ್ಚಿನ ಬಗೆಗೆ ಡಾ. ನಾರಾಯಣ ಹುಲ್ಸೆ ಅವರು ತಿಳಿಸುತ್ತಾರೆ. ಭಾರತದಲ್ಲಿ ಇತರ ಎಲ್ಲ ದೇಶಗಳಿಗಿಂತ ಕಡಮೆ ಖರ್ಚಿನಲ್ಲಿ ಇದು ಸಾಧ್ಯವಾಗುತ್ತದೆ ಎಂದು ಅವರು ಅಂಕಿಅಂಶಗಳ ಮೂಲಕ ವಿವರಿಸುತ್ತಾರೆ. ಈ ಕಾರಣದಿಂದಲೆ, ವಾತರೋಗಪೀಡಿತರು ಹಲವಾರು ದೇಶಗಳಿಂದ ಇಲ್ಲಿಗೆ ಬಂದು ಕಡಮೆ ಖರ್ಚಿನಲ್ಲಿ ಸಫಲ ಶಸ್ತ್ರಚಿಕಿತ್ಸೆಯನ್ನು ಮಾಡಿಸಿಕೊಂಡು ಹಿಂತಿರುಗಿದ್ದಾರೆ.

**ಡಾ.ನಾರಾಯಣ ಹುಲ್ಸೆ**
**Email: hulseclinic@gmail.com**
**Mob: 73384 82504**

# ಫ್ಲೋರಿನ್ ಎರಡು ಅಂಚಿನ ಕತ್ತಿ



■ **ಡಾ.ಸತೀಶ್ ಟಿ.ಜಿ.**
**ಜೀವರಸಾಯನ ಶಾಸ್ತ್ರ ವಿಭಾಗದ ಮುಖ್ಯಸ್ಥರು ಮತ್ತು ಪ್ರಾಧ್ಯಾಪಕರು ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ.**

ನಗು ಒಂದು ವಕ್ರರೇಖೆಯಾಗಿದ್ದು ಅದು ಹಲವು ವಿಷಯಗಳನ್ನು ಸರಳ ರೇಖೆಯಷ್ಟು ಸುಲಭವಾಗಿಸುತ್ತದೆ. ಆದರೆ ಅದೇ ನಗು ಹಲ್ಲುಗಳ ಕ್ಷಯ ಅಥವಾ ಕಂದು ಬಣ್ಣದ ಮುಚ್ಚೆಯನ್ನು ಸಹ ಬಹಿರಂಗಪಡಿಸುತ್ತದೆ. ಇದರಿಂದ ಆ ವ್ಯಕ್ತಿ ನಗಲು ಹಿಂಜರಿಯುತ್ತಾನೆ.

ತುಮಕೂರಿನಲ್ಲಿ ವಿಶೇಷವಾದ ಕಂದು ಬಣ್ಣದ ನಗುವನ್ನು ಹೊಂದಿರುವ ವಿದ್ಯಾರ್ಥಿಗಳೆಲ್ಲರೂ ಮಧುಗಿರಿ ಅಥವಾ ಪಾವಗಡ ತಾಲ್ಲೂಕಿನವರು, ತುಮಕೂರು ಜಿಲ್ಲೆ ಫ್ಲೋರೋಸಿಸ್‌ಗೆ ಹೆಸರುವಾಸಿಯಾಗಿದೆ. ಆಂಧ್ರದ ಗಡಿ ತಾಲ್ಲೂಕುಗಳಾದ ಕೊರಟಗೆರೆ, ಶಿರಾ, ಮಧುಗಿರಿ ಹಾಗೂ ಪಾವಗಡದಲ್ಲಿ ಹೆಚ್ಚಾಗಿ ಕಂಡು ಬರುತ್ತದೆ

ಫ್ಲೋರೋಸಿಸ್ ಕಾಯಿಲೆ ಮುಖ್ಯವಾಗಿ ಹಲ್ಲುಗಳು ಮತ್ತು ಮೂಳೆಗಳನ್ನು ಬಾಧಿಸುತ್ತದೆ. ಫ್ಲೋರೋಸಿಸ್‌ಗೆ ಮುಖ್ಯಕಾರಣವೆಂದರೆ ಹೆಚ್ಚಿನ ಪ್ರಮಾಣದ ಫ್ಲೋರಿನ್ ಹೊಂದಿರುವ ನೀರನ್ನು ಕುಡಿಯುವುದು. ಪಂಜಾಬ್, ಹರಿಯಾಣ, ಆಂಧ್ರಪ್ರದೇಶ, ಕರ್ನಾಟಕ, ಕೇರಳ ಮತ್ತು ತಮಿಳುನಾಡುಗಳಲ್ಲಿ ಸ್ಥಳೀಯ ಫ್ಲೋರೋಸಿಸ್ ಆರೋಗ್ಯ ಸಮಸ್ಯೆಯಾಗಿದೆ ಎಂದು ವರದಿಯಾಗಿದೆ.

ಭಾರತ ಸರ್ಕಾರ ಪ್ರಕಾರ ಏಪ್ರಿಲ್ 2021 ರ ಹೊತ್ತಿಗೆ ಭಾರತದ 21 ರಾಜ್ಯಗಳಾದ್ಯಂತ 230 ಜಿಲ್ಲೆಗಳಲ್ಲಿ ಫ್ಲೋರೋಸಿಸ್ ಹರಡುವಿಕೆ ವರದಿಯಾಗಿದೆ. WHO ಪ್ರಕಾರ ಫ್ಲೋರೈಡ್ ಬಳಕೆಯ ಸುರಕ್ಷಿತ ಮಿತಿ 1.5 ಕಕಅ.

ಫ್ಲೋರಿನ್ ಹೆಚ್ಚು ಕ್ರಿಯಾತ್ಮಕವಾಗಿದೆ, ಆದ್ದರಿಂದ ಸಂಯೋಜನೆಯ ರೂಪದಲ್ಲಿ ಫ್ಲೋರೈಡ್ ಉಪ್ಪಿನಂತೆ ಕಂಡು ಬರುತ್ತದೆ. ದೇಹದಲ್ಲಿನ ಸುಮಾರು 96% ಫ್ಲೋರೈಡ್ ಮೂಳೆಗಳು ಮತ್ತು ಹಲ್ಲುಗಳಲ್ಲಿ ಕಂಡು ಬರುತ್ತದೆ. ಮೂಳೆಗಳ ಖನಿಜೀಕರಣ ಮತ್ತು ಹಲ್ಲಿನ ದಂತ ಕವಚದ ರಚನೆಯಲ್ಲಿ ಫ್ಲೋರೈಡ್ ಪ್ರಮುಖವಾಗಿದೆ

ಕಲ್ಲು ಉಪ್ಪನ್ನು ಭಾರತದಲ್ಲಿ ಕಾಲಾನಮಕ್ ಎಂದು ಕರೆಯಲಾಗುತ್ತದೆ. ಇದು ಭಾರತೀಯ ಮನೆ ಅಡುಗೆ ಮತ್ತು ಬೀದಿ ಆಹಾರಗಳಲ್ಲಿ ವ್ಯಾಪಕವಾಗಿ ಬಳಸುವರು. ಆಹಾರಕ್ಕೆ ವಿಶಿಷ್ಟ ಹಾಗೂ ಕಟು ಪರಿಮಳವನ್ನು ನೀಡುತ್ತದೆ. ಕಾಲಾ ನಮಕ್‌ನಲ್ಲಿ 157 PPM ಮತ್ತು ವಿಶ್ಲೇಷಿಸಿದ ಅಂತರ್ಜಲದ ಮಾದರಿಗಳಲ್ಲಿ 48 ಕಕಅ ವರೆಗೆ ಫ್ಲೋರಿನ್ ಒಳಗೊಂಡಿದೆ.

ಕ್ಯಾಲ್ಸಿಯಂ ಫ್ಲೋರೈಡ್ ಇದರ ಪ್ರಮುಖ ಅಂಶವಾಗಿದೆ. ಕಾಲಾ ನಮಕ್‌ನ ಆಹಾರದ ಮೇಲೆ ಆಗೊಮ್ಮೆ, ಈಗೊಮ್ಮೆ ಚಿಮುಕಿಸುವುದು ಪರವಾಗಿಲ್ಲ, ಆದರೆ ಫ್ಲೋರೈಡ್ ಸಮೃದ್ಧವಾಗಿರುವ ನೀರನ್ನು ಒಂದು ನಿರ್ದಿಷ್ಟ ಸಮಯದವರೆಗೆ ಸೇವಿಸಿದಾಗ ಅದು ಖಂಡಿತವಾಗಿಯೂ ಅಪಾಯಕಾರಿ.




ದಿನನಿತ್ಯದ ಅಗತ್ಯಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಕುಡಿಯುವ ನೀರು ಮತ್ತು ಕಲ್ಲು ಉಪ್ಪಿನ ಮೂಲಕ ಫ್ಲೋರೈಡ್‌ಗಳ ದೀರ್ಘಕಾಲದ ಸೇವನೆಯು ದಂತ ಮತ್ತು ಅಸ್ಥಿಪಂಜರದ ಫ್ಲೋರೋಸಿಸ್‌ಗೆ ಕಾರಣವಾಗುತ್ತದೆ.

ಅದೇ ಸಮಯದಲ್ಲಿ ಕಡಿಮೆ ಸೇವನೆಯು (<0.5 PPM) ದಂತಕ್ಷಯವನ್ನು ಉಂಟುಮಾಡುತ್ತದೆ. ಆದ್ದರಿಂದ, ಫ್ಲೋರಿನ್ ಅನ್ನು ಎರಡು ಅಲಗಿನ ಕತ್ತಿ ಎಂದು ಕರೆಯಲಾಗುತ್ತದೆ.

- ಹಲ್ಲಿನ ಕ್ಷಯವನ್ನು ತಡೆಗಟ್ಟಲು ಪೂರಕ ಫ್ಲೋರೈಡ್ ಅನ್ನು ಅತ್ಯಂತ ಪರಿಣಾಮಕಾರಿ ವಿಧಾನವೆಂದು ಗುರುತಿಸಲಾಗಿದೆ. ಹಾಗಾಗಿ ಹಲ್ಲಿನ ಕ್ಷಯವನ್ನು ತಡೆಗಟ್ಟಲು ಟೂತ್‌ಪೇಸ್ಟ್‌ಗಳಲ್ಲಿ ಫ್ಲೋರೈಡ್ ಉಪ್ಪನ್ನು ಸೇರಿಸಲಾಗುತ್ತದೆ.
- ಫ್ಲೋರಿನ್ ಹೆಚ್ಚು ಅಲ್ಲ, ಕಮ್ಮಿಯೂ ಅಲ್ಲದೆ ಸರಿಯಾದ ಪ್ರಮಾಣದಲ್ಲಿ ಸೇವಿಸಬೇಕು.

ಫ್ಲೋರೋಸಿಸ್ ದಂತ ಮತ್ತು ಅಸ್ಥಿಪಂಜರದ ವ್ಯವಸ್ಥೆಗಳ ಮೇಲೆ ಪರಿಣಾಮ ಬೀರುತ್ತದೆ. ಜೀವನದ ಆರಂಭಿಕ 7 ವರ್ಷಗಳಲ್ಲಿ ಹೆಚ್ಚುವರಿ (5 PPM) ಫ್ಲೋರೈಡ್ ಅನ್ನು ಸೇವಿಸಿದಾಗ ದಂತ ಕವಚದ ದಂತ ಫ್ಲೋರೋಸಿಸ್ ಸಂಭವಿಸುತ್ತದೆ. ವಿಶಿಷ್ಟ ಲಕ್ಷಣವೆಂದರೆ ಹಲ್ಲಿನ ದಂತ ಕವಚದ ಮುಚ್ಚೆ. ಹಲ್ಲುಗಳು ತಮ್ಮ ಹೊಳೆಯುವ ನೋಟವನ್ನು ಬದಲಾಯಿಸುತ್ತವೆ ಮತ್ತು ಅವುಗಳ ಮೇಲೆ ಸೀಮೆಸುಣ್ಣದ ಬಿಳಿ ತೇಪೆಗಳು ಬೆಳೆಯುತ್ತವೆ. ಇದು ಡೆಂಟಲ್ ಫ್ಲೋರೋಸಿಸ್‌ನ ಆರಂಭಿಕ ಲಕ್ಷಣವಾಗಿದೆ. ಸಮಯ ಕಳೆದಂತೆ ಬಿಳಿ ತೇಪೆಗಳು ಹಳದಿ ಬಣ್ಣಕ್ಕೆ ನಂತರ ಕಂದು ಬಣ್ಣಕ್ಕೆ ಹಾಗೂ ಕಪ್ಪು ಬಣ್ಣಕ್ಕೆ ತಿರುಗುತ್ತವೆ. ಮೇಲಿನ ದವಡೆಯ ಬಾಚಿಹಲ್ಲುಗಳ ಮೇಲೆ ಮೊಟ್ಲಿಂಗ್ ಅನ್ನು ಉತ್ತಮವಾಗಿ ಗಮನಿಸಬಹುದು. ಎಲ್ಲಾ ಬದಲಾವಣೆಗಳು ಶಾಶ್ವತ ಹಲ್ಲುಗಳಿಗೆ ಸೀಮಿತವಾಗಿವೆ ಮತ್ತು ಅವುಗಳ ರಚನೆಯ ಸಮಯದಲ್ಲಿ ಕಾಣಿಸಿಕೊಳ್ಳುತ್ತವೆ.

ಫ್ಲೋರೈಡ್‌ನ ದೀರ್ಘಕಾಲದ ಸೇವನೆಯು ಆಸ್ಟಿಯೊಪೊರೋಸಿಸ್ ಮತ್ತು ಆಸ್ಟಿಯೋಸ್ಕ್ಲೆರೋಸಿಸ್ ನಂತಹ ಮೂಳೆಗಳಲ್ಲಿ ತೀವ್ರವಾದ ರಚನಾತ್ಮಕ ವೈಪರೀತ್ಯಗಳನ್ನು ಉಂಟುಮಾಡುತ್ತದೆ. ಇದು ಕೀಲುಗಳ ಚಲನಶೀಲತೆಯ ಮೇಲೆ ಪರಿಣಾಮ ಬೀರುತ್ತದೆ. ಪೀಡಿತ ವ್ಯಕ್ತಿಯು ಮೊಣಕಾಲುಗಳನ್ನು (ಜೆನು ವಾಲ್ಗಮ್) ಮತ್ತು ಬೆನ್ನುಹುರಿಯ ವಕ್ರತೆಯ ಅಸಹಜತೆಗಳನ್ನು (ಕೈ ಫೋಸಿಸ್) ಬೆಳೆಸಿಕೊಳ್ಳುತ್ತಾನೆ.

ಭಾರತದಲ್ಲಿ 25 ಮಿಲಿಯನ್ ಜನರು ಫ್ಲೋರೋಸಿಸ್‌ನಿಂದ ಬಳಲುತ್ತಿದ್ದಾರೆ. ಅಪಾಯದಲ್ಲಿರುವ ಜನಸಂಖ್ಯೆಯು 60 ಮಿಲಿಯನ್ ಎಂದು ಅಂದಾಜಿಸಲಾಗಿದೆ. ಭಾರತವು 2009 ರಿಂದ ಫ್ಲೋರೋಸಿಸ್ ತಡೆಗಟ್ಟುವಿಕೆ ಮತ್ತು ನಿಯಂತ್ರಣಕ್ಕಾಗಿ ರಾಷ್ಟ್ರೀಯ ಕಾರ್ಯಕ್ರಮವನ್ನು ಹೊಂದಿದೆ. ಈ ಕಾರ್ಯಕ್ರಮವು 17 ರಾಜ್ಯಗಳಲ್ಲಿ ಸುಮಾರು 200 ಜಿಲ್ಲೆಗಳನ್ನು ಗುರಿಯಾಗಿಸಿಕೊಂಡಿದೆ. ಗ್ರಾಮ ಮತ್ತು ಜಿಲ್ಲಾ ಮಟ್ಟದಲ್ಲಿ ಹೆಚ್ಚಿದ ರೋಗ ಪತ್ತೆಹಚ್ಚುವಿಕೆ ಚಟುವಟಿಕೆಗಳು, ಚಿಕಿತ್ಸೆ ಮತ್ತು ಪುನರ್ವಸತಿ ಕಾರ್ಯಕ್ರಮವು ಪ್ರಗತಿಯಲ್ಲಿದೆ. ಹೆಚ್ಚುತ್ತಿರುವ ಪ್ರದೇಶಗಳಲ್ಲಿ ಡಿಫ್ಲೋರೈಡೀಕರಣ ಘಟಕಗಳ ಸ್ಥಾಪನೆಯು ಫ್ಲೋರೈಡ್ ಮುಕ್ತ ಕುಡಿಯುವ ನೀರನ್ನು ಒದಗಿಸುವುದು ಮತ್ತೊಂದು ವಿಧಾನವಾಗಿದೆ.

ಬೆಳೆಯುತ್ತಿರುವ ಪೀಳಿಗೆಗೆ, ಉತ್ತಮ ರಾಷ್ಟ್ರಕ್ಕಾಗಿ ಹೊಳೆಯುವ ಹಲ್ಲುಗಳು ಮತ್ತು ಬಲವಾದ ಮೂಳೆಗಳನ್ನು ನಿರ್ಮಿಸಲು ಫ್ಲೋರೈಡ್ ಮುಕ್ತ ನೀರು ಲಭ್ಯವಾಗುವಂತೆ ಮಾಡಬೇಕು.




## ಅವಧಿಪೂರ್ವ ಜನಿಸಿದ ಮಕ್ಕಳಿಗೆ ತಾಯಿ ಮಡಿಲು

ಶ್ರೀದೇವಿ ವೈದ್ಯಕೀಯ ಆಸ್ಪತ್ರೆ ಮತ್ತು ಸಂಶೋಧನಾ ಸಂಸ್ಥೆಯಲ್ಲಿರುವ ನಮ್ಮ ಮಕ್ಕಳ ರೋಗಶಾಸ್ತ್ರ ವಿಭಾಗದ ಯಶಸ್ವಿನ ಕಥೆಯೊಂದನ್ನು ನಿಮ್ಮೊಡನೆ ಹಂಚಿಕೊಳ್ಳುತ್ತೇವೆ.

ನಾವು ಇತ್ತೀಚೆಗೆ NICU ನಿಂದ 3VLBW(<1500 ಗ್ರಾಂ) ಶಿಶುಗಳನ್ನು ಡಿಸ್ಚಾರ್ಜ್ ಮಾಡಿದ್ದೇವೆ. ಜನ್ಮಜಾತ ಅವಳಿ ಶಿಶುಗಳಲ್ಲಿ ಒಂದು ಮಗುವಿನ ತೂಕ 1.44ಕೆ.ಜಿ ಮತ್ತೊಂದು ಮಗುವಿನ ತೂಕ 1.24 ಕೆ.ಜಿ ಇತ್ತು. ಆಕ್ರಮಣಶೀಲವಲ್ಲದ ವಾತಾಯನ (CPAP ಮತ್ತು HHHFNC ಬೆಂಬಲ), ಬೆಚ್ಚಗಿನ ಆರೈಕೆ, ಭಾಗಶಃ ಪೇರೆಂಟೆರಲ್ ಪೋಷಣೆ, ಆರಂಭದಲ್ಲಿ ತಾಯಿಯ ಹಾಲಿನ ಆಹಾರ ನೀಡಿಕೆ, ನವಜಾತ ಶಿಶುವಿನ ಸೆಪ್ಸಿಸ್‌ಗೆ (Sepsiss) ಸೂಕ್ತ ಚಿಕಿತ್ಸೆ, ಕ್ರಮೇಣ ಫೀಡ್‌ಗಳ ಏರಿಕೆ, ಕಾಂಗರೂ ತಾಯಿಯ ಆರೈಕೆಯನ್ನು ತಕ್ಷಣ ಒದಗಿಸಿದ್ದರಿಂದ ಶಿಶುಗಳು ಬಹು ಬೇಗ ಗುಣಮುಖರಾದವು.

ಸುಮಾರು 16–20 ದಿನ ಆಸ್ಪತ್ರೆಯಲ್ಲಿ ತಂಗಿದ್ದ ನಂತರ ಜನನ ತೂಕ, ಸ್ಥಿರವಾದ ತೂಕ ಹೆಚ್ಚಾಗುವುದು. ಕುಟುಂಬವು ಈ ಪುಟ್ಟ ಶಿಶುಗಳನ್ನು ನೋಡಿಕೊಳ್ಳಲು ಸಮರ್ಥವಾಗಿ ಎನ್ನುವ ವಿಶ್ವಾಸ ಮೂಡಿದ ಮೇಲೆ ಶಿಶುಗಳನ್ನು ಬಿಡುಗಡೆ ಮಾಡಲಾಯಿತು. ಓಉಆಗನ ಶುಶ್ರೂಷಾ ಸಿಬ್ಬಂದಿ ಈ ಅವಧಿಪೂರ್ವ ನಿರ್ವಹಣೆಯ ಕಾರ್ಯತಂತ್ರಗಳ ಅನುಷ್ಠಾನದಲ್ಲಿ ಹೆಚ್ಚಿನ ಕಾಳಜಿ ವಹಿಸಿದ್ದಾರೆ.

ನಮ್ಮ ಮಕ್ಕಳ ರೋಗಶಾಸ್ತ್ರ ವಿಭಾಗದ ಎಲ್ಲಾ ಸಲಹೆಗಾರರ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳ ಪ್ರೋತ್ಸಾಹ ಮತ್ತು ಬೆಂಬಲಕ್ಕಾಗಿ ಮೆಡಿಕಲ್ ಸೂಪರಿಂಟೆಂಡೆಂಟ್ ಮೋಹನಕುಮಾರ್ ಅವರು ಧನ್ಯವಾದಗಳನ್ನು ಅರ್ಪಿಸಿದ್ದಾರೆ.

## ಹೆಸರಾಂತ ಹಿರಿಯ ಲೆಕ್ಕಪರಿಶೋಧಕ ಡಿ.ಆರ್.ವೆಂಕಟೇಶ್ ನಿಧನ

ಹೆಸರಾಂತ ಹಿರಿಯ ಲೆಕ್ಕಪರಿಶೋಧಕ ಡಿ.ಆರ್.ವೆಂಕಟೇಶ್ (66) ಅವರು ಜನವರಿ 22ರಂದು ಹೃದಯಾಘಾತದಿಂದ ನಿಧನರಾದರು. ಅವರ ಸ್ವಗ್ರಾಮ ಚಿತ್ರದುರ್ಗದ ಬೊಮ್ಮೇನಹಳ್ಳಿಯಲ್ಲಿ ಅಂತ್ಯಕ್ರಿಯೆ ನೆರವೇರಿತು..



ಡಾ.ಡಿ.ಆರ್. ವೆಂಕಟೇಶ್ ಅವರು ರಾಜ್ಯ, ರಾಷ್ಟ್ರಮಟ್ಟದಲ್ಲಿ ಪರಿಣಿತ ಲೆಕ್ಕಪರಿಶೋಧಕರಾಗಿದ್ದ ಹೆಸರು ಮಾಡಿದ್ದರು. ತೆರಿಗೆ ಸಂಬಂಧಪಟ್ಟ ವಿಷಯಗಳಿಗೆ ಉಪನ್ಯಾಸ ಕೊಡಲು ಆದಾಯ ತೆರಿಗೆ ಇಲಾಖೆಯವರು ಆಹ್ವಾನ ಮಾಡುತ್ತಿದ್ದರು. ಅವರು ತೆರಿಗೆ ಸಂಬಂಧಪಟ್ಟಂತೆ ಪಿಹೆಚ್.ಡಿ. ಮಾಡಿದ್ದರು. ಶ್ರೀದೇವಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಡಾ.ಎಂ.ಆರ್.ಹುಲಿನಾಯ್ಕರ್ ಅವರು 'ಡಾ.ವೆಂಕಟೇಶ್ ಸ್ವಭಾವತ: ಸಜ್ಜನರು, ದೈವಭಕ್ತರು. ಹಣಕಾಸು ನಿರ್ವಹಣೆಯ ಅತ್ಯಂತ ಸಮರ್ಥವಾಗಿ ನಮಗೆ ಮಾರ್ಗದರ್ಶನ ಮಾಡುತ್ತಿದ್ದರು. ಶ್ರೀದೇವಿ ಶಿಕ್ಷಣ ಸಂಸ್ಥೆಯ ಬೆಳವಣಿಗೆಯಲ್ಲಿ ಅವರ ಕೊಡುಗೆ ಸಹ ಇದೆ. ಅವರ ನಿಧನದಿಂದ ನಮಗೆ ಅತ್ಯಂತ ಆಪ್ತರನ್ನು ಕಳೆದುಕೊಂಡಷ್ಟು ನಷ್ಟವಾಗಿದೆ" ಎಂದಿದ್ದಾರೆ.

# ನೂತನ 2024 ಹೊಸ ವರ್ಷದ ಕ್ಯಾಲೆಂಡರ್ ಬಿಡುಗಡೆ

“ಪ್ರತಿಯೊಬ್ಬರಿಗೂ ಆರೋಗ್ಯವನ್ನು ಕಾಪಾಡಿಗೊಳ್ಳುವ ಶಕ್ತಿಯನ್ನು ದೇವರು ನೀಡಲಿ ಹಾಗೂ ಸಮೃದ್ಧ ಆರೋಗ್ಯಭರಿತ ಸಮುದಾಯವನ್ನು ನಾವೆಲ್ಲರೂ ಕಟ್ಟೋಣ” ಎಂದು ಶ್ರೀದೇವಿ ಸಮೂಹ ಸಂಸ್ಥೆಯ ವೈದ್ಯರಿಗೆ, ಅಧ್ಯಾಪಕರುಗಳಿಗೆ ಮತ್ತು ಸಿಬ್ಬಂದಿ ವರ್ಗದವರಿಗೆ ಶುಭಾಶಯಗಳನ್ನು ಕೋರುತ್ತಾ, ನೂತನ 2024 ಹೊಸ ವರ್ಷದ ಕ್ಯಾಲೆಂಡರ್, ಮತ್ತು ಡೈರಿಯನ್ನು ಶ್ರೀದೇವಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಡಾ.ಎಂ.ಆರ್. ಹುಲಿನಾಯ್ಕರ್‌ರವರು ಬಿಡುಗಡೆ ಮಾಡಿದರು.

ನೂತನ ವರ್ಷದ ಆರಂಭದಲ್ಲಿ ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ವತಿಯಿಂದ ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆಗಳ ವತಿಯಿಂದ ಕ್ಯಾಲೆಂಡರ್ ಮತ್ತು ಡೈರಿಯನ್ನು ಬಿಡುಗಡೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಪ್ರತಿ ವರ್ಷವು ಶ್ರೀದೇವಿ ಶಿಕ್ಷಣ ಸಂಸ್ಥೆಯ ಫಲಿತಾಂಶಗಳನ್ನು ನೋಡಿದರೆ ಬಹಳ ಸಂತೋಷವಾಗುತ್ತದೆ. ಈ ಸಂಸ್ಥೆಯಲ್ಲಿ ಕೆಲಸ ಮಾಡುವ ಪ್ರಾಂಶುಪಾಲರು, ಅಧ್ಯಾಪಕರು, ಬೋಧಕ ಮತ್ತು ಬೋಧಕೇತರ ವರ್ಗದವರು ಅಭಿನಂದನೆಗೆ ಅರ್ಹರು ಎಂದು ಸಂಸ್ಥೆಯ ಅಧ್ಯಕ್ಷರು ತಿಳಿಸಿದರು.




**ಚಿತ್ರದಲ್ಲಿ ಶ್ರೀದೇವಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಡಾ.ಎಂ.ಆರ್.ಹುಲಿನಾಯ್ಕರ್, ಶ್ರೀದೇವಿ ವೈದ್ಯಕೀಯ ನಿರ್ದೇಶಕರಾದ ಡಾ.ರಮಣ್ ಎಂ ಹುಲಿನಾಯ್ಕರ್, ಶ್ರೀದೇವಿ ಸಂಸ್ಥೆಯ ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕರಾದ ಎಂ.ಎಸ್. ಪಾಟೀಲ್, ಶ್ರೀದೇವಿ ಆಸ್ಪತ್ರೆಯ ನೇತ್ರ ತಜ್ಞರಾದ ಡಾ.ಲಾವಣ್ಯ, ಟ್ರಸ್ಟಿಯಾದ ಅಂಬಿಕಾ ಎಂ ಹುಲಿನಾಯ್ಕರ್, ಆಡಳಿತಾಧಿಕಾರಿಯಾದ ಟಿ.ವಿ.ಬ್ರಹ್ಮದೇವಯ್ಯ, ಶ್ರೀದೇವಿ ವೈದ್ಯಕೀಯ ಪ್ರಾಂಶುಪಾಲರಾದ ಡಾ.ಎಂ.ಎಲ್.ಹರೇಂದ್ರ ಕುಮಾರ್, ಉಪಪ್ರಾಂಶುಪಾಲರಾದ, ಡಾ.ರೇಣುಕಾಗುರುಮೂರ್ತಿ, ಶ್ರೀದೇವಿ ಆಸ್ಪತ್ರೆಯ ಶ್ರೀದೇವಿ ಆಸ್ಪತ್ರೆಯ ಸಿ.ಎ.ಓ ಪ್ರದೀಪ್‌ಕುಮಾರ್, ಬ್ರೈನ್ ವಾಯ್ಸ್ ಪತ್ರಿಕೆಯ ಸಂಪಾದಕರಾದ ಡಾ.ಕೆ.ಆರ್.ಕಮಲೇಶ್ ಮತ್ತು ಶ್ರೀದೇವಿ ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲರಾದ ಡಾ.ನರೇಂದ್ರ ವಿಶ್ವನಾಥ್ ಇದ್ದರು.**

## ಸಿ.ಎಂ.ಇ. ಕಾರ್ಯಾಗಾರ

# ಹೃದಯ ವೈಫಲ್ಯದ ನಿರ್ವಹಣೆಯಲ್ಲಿ ಇತ್ತೀಚಿನ ಪ್ರವೃತ್ತಿಗಳು

"ಹೃದಯರೋಗಕ್ಕೆ ಸಂಬಂಧಪಟ್ಟ ಶಸ್ತ್ರಚಿಕಿತ್ಸೆಗಳು ಅಂದರೆ 'ತೆರೆದ ಹೃದಯ ಶಸ್ತ್ರಚಿಕಿತ್ಸೆ' 'ಕವಾಟಗಳಿಗೆ ಸಂಬಂಧಪಟ್ಟ ಶಸ್ತ್ರಚಿಕಿತ್ಸೆಗಳು,' 'ರಕ್ತನಾಳಗಳಿಗೆ ಸಂಬಂಧಪಟ್ಟ ಶಸ್ತ್ರಚಿಕಿತ್ಸೆ'ಗಳು ನಡೆಯುತ್ತಿರುತ್ತವೆ. ಹೃದಯಾಘಾತ ರೋಗಿಗಳ ನಿರ್ವಹಣೆಗೆ ಸೂಕ್ತ ಔಷಧೋಪಚಾರಗಳನ್ನು ತ್ವರಿತವಾಗಿ ಆರಂಭಿಸಲು ಮತ್ತು ಸಾಕ್ಷ್ಯಾಧಾರಿತ ಶಿಷ್ಟಾಚಾರವನ್ನು ಸೂಕ್ತವಾಗಿ ಅನುಸರಿಸುವ ದಿಕ್ಕಿನಲ್ಲಿ ಪ್ರಯತ್ನಗಳು ನಡೆಯಬೇಕಾಗಿದೆ, ರೋಗಿಗಳ ಆರೈಕೆಯ ಗುಣಮಟ್ಟವನ್ನು ಹೆಚ್ಚಿಸಲು ಆರೋಗ್ಯಕ್ಷೇತ್ರದ ಸಿಬ್ಬಂದಿಗಳು ತಮ್ಮ ವೈಜ್ಞಾನಿಕಜ್ಞಾನ ಮತ್ತು ಕೌಶಲ್ಯವನ್ನು ನಿಯಮಿತವಾಗಿ ನವೀಕರಿಸುವುದು ಅವರ ವೃತ್ತಿಪರ ಜವಾಬ್ದಾರಿಯಾಗಿದೆ. ಈ ಸಿಬ್ಬಂದಿಗಳ ಜ್ಞಾನ ಅವರ ರೋಗಿಗಳಿಗೆ ದೊರೆಯುತ್ತದೆ" ಎಂದು ಶ್ರೀದೇವಿ ಶಿಕ್ಷಣ ವಿದ್ಯಾಸಂಸ್ಥೆಯ ಅಧ್ಯಕ್ಷರಾದ ಡಾ.ಎಂ.ಆರ್. ಹುಲಿನಾಯ್ಕರ್ ಅವರು, ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಆಸ್ಪತ್ರೆ ಮತ್ತು ಶ್ರೀದೇವಿ ಆಸ್ಪತ್ರೆಯ ಹೃದ್ರೋಗ ವಿಭಾಗದ ಸಹಯೋಗದೊಂದಿಗೆ ಫಾರ್ಮಕಾಲಜಿ ವಿಭಾಗದಿಂದ ಹಮ್ಮಿಕೊಂಡಿದ್ದ 'ಹೃದಯ ವೈಫಲ್ಯದ ನಿರ್ವಹಣೆಯಲ್ಲಿ ಇತ್ತೀಚಿನ ಪ್ರವೃತ್ತಿ" ಒಂದು ದಿನದ ಕಾರ್ಯಾಗಾರವನ್ನು 2023ರ ಡಿಸೆಂಬರ್ 23ರಂದು ಉದ್ಘಾಟಿಸುತ್ತಾ ತಿಳಿಸಿದರು.

ಈ ಕಾರ್ಯಾಗಾರದಲ್ಲಿ ತುಮಕೂರಿನ ವೈದ್ಯಕೀಯ ಅಧ್ಯಾಪಕರು, ಖಾಸಗಿ ಆಸ್ಪತ್ರೆಯ ವೈದ್ಯರು, ವೈದ್ಯಕೀಯ ಕೋರ್ಸ್‌ನ ಪದವಿ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳು ಸೇರಿದಂತೆ ಅನೇಕರು ಭಾಗವಹಿಸಿದ್ದರು. ಸಿ.ಎಂ.ಇ. ಕಾರ್ಯಾಗಾರವನ್ನು ಹೈಬ್ರಿಡ್ ಮೋಡ್‌ನಲ್ಲಿ ಆಯೋಜಿಸಲಾಗಿತ್ತು. ಅದರಲ್ಲಿ ಆನ್–ಸೈಟ್ ಮತ್ತು ಆನ್‌ಲೈನ್ ಮೋಡ್‌ನ ಎರಡು ಮಾದರಿಯಲ್ಲಿ ಪ್ರತಿನಿಧಿಗಳು ಭಾಗವಹಿಸಿದ್ದರು.

ಕಾರ್ಯಕ್ರಮದಲ್ಲಿ ಶ್ರೀದೇವಿ ವೈದ್ಯಕೀಯ ನಿರ್ದೇಶಕರಾದ ಡಾ.ರಮಣ್ ಎಂ ಹುಲಿನಾಯ್ಕರ್ ಅವರು "ಹೃದಯ ವೈಫಲ್ಯ (ಹೆಚ್.ಎಫ್) ನಿರ್ವಹಣೆಯಲ್ಲಿ ಗಮನಾರ್ಹ ಸವಾಲುಗಳಿವೆ. ಹೃದಯ ವೈಫಲ್ಯ ನಿರ್ವಹಣೆ ಒಂದು ನಿರ್ಣಾಯಕ ಪ್ರಯತ್ನವಾಗಿದೆ. ರೋಗಿಗಳ ಫಲಿತಾಂಶಗಳನ್ನು ಸುಧಾರಿಸಲು ಈ ಕ್ಷೇತ್ರದಲ್ಲಿ ಸವಾಲುಗಳನ್ನು ಜಯಿಸುವುದು ವೈದ್ಯರಿಗೆ ಅಗತ್ಯವಾಗಿರುತ್ತದೆ" ಎಂದರು.

ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ.ಎಂ.ಎಲ್. ಹರೇಂದ್ರಕುಮಾರ್‌ರವರು ಮಾತನಾಡುತ್ತಾ "ಭಾರತದಲ್ಲಿ ಹೃದಯ ವೈಫಲ್ಯ ಸೇರಿದಂತೆ ಹೃದಯರಕ್ತನಾಳದ ಕಾಯಿಲೆಗಳು (ಸಿ.ವಿ.ಡಿ.ಗಳು) ಮಹತ್ವದ ಆರೋಗ್ಯ ಕಾಳಜಿಯಾಗಿದೆ. ಭಾರತದಲ್ಲಿ ಹೃದಯಾಘಾತಕ್ಕೊಳಗಾಗುವವರ ಸಂಖ್ಯೆ ಸರಿಸುಮಾರು 8–10 ಮಿಲಿಯನ್ ಎಂದು ಅಂದಾಜಿಸಲಾಗಿದೆ. ಇದೊಂದು ದೊಡ್ಡ ಪ್ರಮಾಣ ಎನ್ನುವುದನ್ನು ನಾವು ಮರೆಯಬಾರದು" ಎಂದರು.




"ಹೃದಯ ವೈಫಲ್ಯದ ನಿರ್ವಹಣೆಯಲ್ಲಿನ ಇತ್ತೀಚಿನ ಪ್ರವೃತ್ತಿ" ಕಾರ್ಯಾಗಾರದ ಚಿತ್ರ. ಶ್ರೀದೇವಿ ಶಿಕ್ಷಣ ವಿದ್ಯಾಸಂಸ್ಥೆಯ ಅಧ್ಯಕ್ಷರಾದ ಡಾ.ಎಂ.ಆರ್.ಹುಲಿನಾಯ್ಕರ್, ಶ್ರೀದೇವಿ ವೈದ್ಯಕೀಯ ನಿರ್ದೇಶಕರಾದ ಡಾ.ರಮಣ್ ಎಂ ಹುಲಿನಾಯ್ಕರ್, ಶ್ರೀದೇವಿ ಸಂಸ್ಥೆಯ ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕರಾದ ಎಂ.ಎಸ್.ಪಾಟೀಲ್, ಶ್ರೀದೇವಿ ಆಸ್ಪತ್ರೆಯ ನೇತ್ರತಜ್ಞರಾದ ಡಾ.ಲಾವಣ್ಯಎಂ.ರಮಣ, ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ.ಎಂ.ಎಲ್.ಹರೇಂದ್ರಕುಮಾರ್, ಶ್ರೀದೇವಿ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರಾದ ಡಾ.ಕೆ.ಮೋಹನ್‌ಕುಮಾರ್, ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯ ಉಪಪ್ರಾಂಶುಪಾಲರಾದ ಡಾ.ರೇಖಾಗುರುಮೂರ್ತಿ, ಡಾ.ಎಸ್.ಸುರೇಶ್, ಡಾ.ಟಿ.ಜಿ. ದೀಪಕ್, ಡಾ.ಇ.ಎಂ. ಸ್ಪರ್ಶದೀಪ್, ಡಾ.ಬಿ.ರಾಜೇಶ್ ಮತ್ತು ಡಾ.ಕೆ.ಎನ್.ಚೈತ್ರ.

ತುಮಕೂರಿನ ಶ್ರೀಸಿದ್ಧಗಂಗಾ ವೈದ್ಯಕೀಯ ಮಹಾವಿದ್ಯಾಲಯದ ವೈದ್ಯಕೀಯ ಪ್ರಾಧ್ಯಾಪಕರಾದ ಡಾ.ಕೆ.ಆರ್.ಪುಟ್ಟರಾಜ್ ಅವರು 'ಹೃದಯ ವೈಫಲ್ಯದ ನಿರ್ವಹಣೆಯಲ್ಲಿನ ಪ್ರವೃತ್ತಿಗಳನ್ನು' ವಿವರಿಸಿದರು. ಅತಿಥಿ ಉಪನ್ಯಾಸಕರಾಗಿ ಮೈಸೂರಿನ ಜೆ.ಎಸ್.ಎಸ್. ವೈದ್ಯಕೀಯ ಕಾಲೇಜಿನ ಹೃದಯ ಅರಿವಳಿಕೆ ತಜ್ಞರಾದ ಡಾ. ದಿನೇಶ್‌ಕುಮಾರ್‌ರವರು ಭಾಗವಹಿಸಿದ್ದರು.

ಸಿ.ಎಂ.ಇ. ಕಾರ್ಯಾಗಾರದಲ್ಲಿ ಪದವಿ ಪೂರ್ವ ವೈದ್ಯಕೀಯ ವಿದ್ಯಾರ್ಥಿಗಳಿಗೆ ಜಿಲ್ಲಾ ಮಟ್ಟದ ಅಂತರ ಕಾಲೇಜು ರಸಪ್ರಶ್ನೆ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಅದರಲ್ಲಿ ಶ್ರೀದೇವಿ ವೈದ್ಯಕೀಯ ಕಾಲೇಜುವತಿಯಿಂದ ಫಾರ್ಮಕಾಲಜಿ ವಿಭಾಗದ ಡಾ.ಬಿ.ರಾಜೇಶ್‌ರವರು ಭಾಗವಹಿಸಿದ್ದರು. ಬೆಳ್ಳೂರು ಕ್ರಾಸ್‌ನ ಆದಿಚುಂಚನಗಿರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯವರು ಈ ಸಾಲಿನ ರೋಲರ್ ಟ್ರೋಫಿಯನ್ನು ಪಡೆದರು.

ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯ ಕಾರ್ಡಿಯಾಲಜಿಸ್ಟ್ ಡಾ.ಎಸ್.ಸುರೇಶ್, ಮೆಡಿಸಿನ್ ವಿಭಾಗದ ಸಹಾಯಕ ಪ್ರೊಫೆಸರ್ ಡಾ.ಟಿ.ಜಿ.ದೀಪಕ್, ಫಾರ್ಮಕಾಲಜಿ ವಿಭಾಗದ ಮುಖ್ಯಸ್ಥರಾದ ಡಾ.ಇ.ಎಂ.ಸ್ಪರ್ಶದೀಪ್ ಹಾಗೂ ಕಾಲೇಜಿನ ಹೃದಯ ಅರಿವಳಿಕೆ ತಜ್ಞರಾದ ಡಾ.ದಿನೇಶ್‌ಕುಮಾರ್ ಅವರು ಭಾಗವಹಿಸಿದ್ದರು.

■ ವರದಿ: ಎನ್. ಆನಂದ್

---

## ಶ್ರೀದೇವಿ ಔಷಧ ವಿಜ್ಞಾನ ಕಾಲೇಜಿನಲ್ಲಿ ಪದವಿ ಪ್ರದಾನ ಸಮಾರಂಭ

# ಶಿಕ್ಷಣ ಎಂಬುದು ಜಗತ್ತನ್ನೇ ಪರಿವರ್ತನೆ ಮಾಡುವ ಆಯುಧ : ಡಾ.ಬಿ.ರಮೇಶ್

**ಶ್ರೀದೇವಿ ಔಷಧ ವಿಜ್ಞಾನ ಮಹಾವಿದ್ಯಾಲಯ ವತಿಯಿಂದ ಮೊದಲನೇ ವರ್ಷದ ಪದವಿ ಪ್ರದಾನ ಸಮಾರಂಭ, ಫಾರ್ಮಸಿ ಕೋರ್ಸ್‌ಗಳ ಉದ್ಘಾಟನಾ ಸಮಾರಂಭ ಹಾಗೂ ಡಿ.ಫಾರ್ಮಾ ಸಮರ್ಪಣಾ ಸಮಾರಂಭವನ್ನು ಡಿ.22 ರಂದು ಹಮ್ಮಿಕೊಳ್ಳಲಾಗಿತ್ತು.**

"ವಿದ್ಯಾರ್ಥಿಗಳ ಜೀವನದಲ್ಲಿ ಜ್ಞಾನ ಅತ್ಯಮೂಲ್ಯವಾಗಿರಲಿ, ವಿದ್ಯಾರ್ಥಿಗಳ ಜೀವನ ಸುಖಮಯವಾಗಿರಲಿ, ವಿದ್ಯಾರ್ಥಿಗಳು ಸಮುದಾಯಕ್ಕೆ ನಿರಂತರವಾಗಿ ಕೊಡುಗೆ ನೀಡಲಿ. ಅವರು ಸಮಾಜದೊಡನೆ ಉತ್ತಮ ಬಾಂಧವ್ಯ ಹೊಂದಿರಲಿ. ವಿದ್ಯಾರ್ಥಿಗಳ ಜೀವನದಲ್ಲಿ ಶಿಕ್ಷಣ ಎಂಬುದು ಜಗತ್ತನ್ನೇ ಪರಿವರ್ತನೆ ಮಾಡುವ ಬಹು ದೊಡ್ಡ ಆಯುಧ. ವಿದ್ಯಾರ್ಥಿಗಳು ತಮ್ಮ ವಿದ್ಯಾಭ್ಯಾಸದ ಕಾಲದಲ್ಲಿಎ ಒಳ್ಳೆಯ ನಡತೆ, ಕಾರ್ಯದಕ್ಷತೆ, ತಾಳ್ಮೆಯಿಂದ ಹೊಂದಿರಬೇಕು. ನೀವು ಕೊಡುವ ಔಷಧಿಗಳು ಅನೇಕ ರೋಗಗಳನ್ನು ವಾಸಿಮಾಡುವುದಿಂದ ತಾವುಗಳು ಸಮಾಜದ ಅತ್ಯಮೂಲ್ಯ ವೃತ್ತಿಯಾಗಿರುತ್ತೀರಾ. ವಿಶ್ವದ ಎಲ್ಲೆಡೆ ತರಬೇತಿ ಹೊಂದಿದ ಫಾರ್ಮಸಿಸ್ಟ್‌ಗೆ ಬಹು ಬೇಡಿಕೆ ಇರುತ್ತದೆ" ಎಂದು ಮಂಡ್ಯದ ಆದಿಚುಂಚನಗಿರಿ ವಿಶ್ವವಿದ್ಯಾಲಯದ ಡೀನ್ ಡಾ.ಬಿ.ರಮೇಶ್‌ರವರು ತಿಳಿಸಿದರು. ಶ್ರೀಯುತರು ಡಿಸೆಂಬರ್ 22ರಂದು ಏರ್ಪಡಿಸಿದ್ದ ಶ್ರೀದೇವಿ ಔಷಧ ವಿಜ್ಞಾನ ಮಹಾವಿದ್ಯಾಲಯ ವತಿಯಿಂದ ಮೊದಲನೇ ವರ್ಷದ ಪದವಿ ಪ್ರದಾನ ಸಮಾರಂಭ, ಫಾರ್ಮಸಿ ಕೋರ್ಸ್‌ಗಳ ಉದ್ಘಾಟನಾ ಸಮಾರಂಭ ಹಾಗೂ ಡಿ.ಫಾರ್ಮಾ ಸಮರ್ಪಣಾ ಸಮಾರಂಭದಲ್ಲಿ ಮಾತನಾಡುತ್ತಾ ತಿಳಿಸಿದರು.

ಕಾರ್ಯಕ್ರಮದಲ್ಲಿ ಗೌರವ ಅತಿಥಿಯಾಗಿದ್ದ ಬೆಂಗಳೂರಿನ ಸಮೂಹ ಫಾರ್ಮಸಿಸ್ಟ್‌ಗಳ ಉದ್ಯಮಾಭಿವೃದ್ಧಿಯ ಉಪಾಧ್ಯಕ್ಷರಾಗಿದ್ದ ಡಾ.ಸುನೀಲ್ ಚಿಪ್ಲೂಣಕರ್ ಅವರು "ಶಿಕ್ಷಣ ಎಂಬುದು ಸ್ಪರ್ಧಾತ್ಮಕ ಯುಗವಿದ್ದಂತೆ. ಪ್ರತಿದಿನವು ಕಲಿಯಬೇಕು ಎಂಬ ಧ್ಯೇಯವಾಗಿರಬೇಕು. ವಿದ್ಯಾರ್ಥಿಗಳು ಕಲಿಯುತ್ತಿರುವಾಗಲೇ ಮುಂದಿನ ಭವಿಷ್ಯದ ಬಗ್ಗೆ ಚಿಂತನೆ ಮಾಡಬೇಕು. ಅನೇಕ ಕಂಪನಿಗಳು ಜೀವವನ್ನು ಉಳಿಸುವ ರಕ್ಷಣಾ ಔಷಧಿ ಮತ್ತು ವ್ಯಾಕ್ಸಿನ್ ತಯಾರುಮಾಡುತ್ತವೆ. ಅದರಲ್ಲಿ ಫಾರ್ಮಸಿಸ್ಟ್‌ಗಳ ಪಾತ್ರ ದೊಡ್ಡದಿದೆ. ಫಾರ್ಮಸಿ ವಿಭಾಗದಲ್ಲಿ ಉದ್ಯೋಗದ ಕೊರತೆಯಿರುವುದಿಲ್ಲ. ನಾವು ಕೆಲಸಕ್ಕೆ ಸೇರಿದ ಕಂಪನಿ ಮತ್ತು ವ್ಯಾಸಂಗ ಮಾಡಿದ ಕಾಲೇಜಿನ ಬಗ್ಗೆ ಗೌರವ ಹೊಂದಿರಬೇಕು.





ಚಿತ್ರದಲ್ಲಿ ಮಂಡ್ಯದ ಆದಿಚುಂಚನಗಿರಿ ವಿಶ್ವವಿದ್ಯಾಲಯದ ಡೀನ್ ಡಾ.ಬಿ.ರಮೇಶ್, ಗೌರವ ಅತಿಥಿಯಾದ ಬೆಂಗಳೂರಿನ ಉಪಾಧ್ಯಕ್ಷರಾದ ಉದ್ಯಮಾಭಿವೃದ್ಧಿ ಸಮೂಹ ಫಾರ್ಮಸ್ಯಿಟಿಕಲ್ ಡಾ.ಸುನೀಲ್ ಚಿಪ್ಲೂಣಕರ್, ಬೆಂಗಳೂರಿನ ಹಿರಿಯ ಜನರಲ್ ಮ್ಯಾನೇಜರ್ ಮತ್ತು ಶಿಲ್ಪಾ ಮೆಡಿಕೇರ್ ಲಿಮಿಟೆಡ್‌ನ ಡಾ.ಟಿ.ಉಮಾಶಂಕರ್, ಡಾ.ಎಂ.ಎಲ್. ಹರೇಂದ್ರಕುಮಾರ್, ಡಾ.ಕೆ.ಮೋಹನ್‌ಕುಮಾರ್, ಟಿ.ವಿ.ಬ್ರಹ್ಮದೇವಯ್ಯ, ಡಾ.ಎಸ್.ಜೆ.ಶಂಕರ್ ಮತ್ತು ಡಾ.ಬಿ.ಗೋಪಾಲಕೃಷ್ಣ ಅವರುಗಳಿದ್ದಾರೆ.

ಕಾಲೇಜಿನಲ್ಲಿ ಕಲಿತ ವಿದ್ಯೆಯನ್ನು ತನ್ನ ಕಾರ್ಯಕ್ಷೇತ್ರದಲ್ಲಿ ಅಳವಡಿಸಿಕೊಳ್ಳಬೇಕು" ಎಂದರು.

ಇದೇ ಸಂದರ್ಭದಲ್ಲಿ ಬೆಂಗಳೂರಿನ ಹಿರಿಯ ಜನರಲ್ ಮ್ಯಾನೇಜರ್ ವಿಶ್ಲೇಷಣಾತ್ಮಕ ಸೂತ್ರೀಕರಣ ಅಭಿವೃದ್ಧಿ ಮತ್ತು ಶಿಲ್ಪಾ ಮೆಡಿಕೇರ್ ಲಿಮಿಟೆಡ್‌ನ ಡಾ.ಟಿ.ಉಮಾಶಂಕರ್ ಅವರು "ಫಾರ್ಮಸಿ ಕೋರ್ಸ್‌ಗಳಲ್ಲಿ ಪದವಿ ಪಡೆದಿರುವ ವಿದ್ಯಾರ್ಥಿಗಳಿಗೆ ಸಾಕಷ್ಟು ಉದ್ಯೋಗಾವಕಾಶಗಳಿವೆ, ಪದವಿ ಹೊಂದಿರುವ ನಿಮ್ಮ ಮೇಲೆ ಸಮಾಜದ ಜವಾಬ್ದಾರಿ ಹೆಚ್ಚಿರುತ್ತದೆ. ಜೊತೆಗೆ ಉತ್ತಮ ಗುಣಮಟ್ಟದ ಔಷಧಿಗಳನ್ನು ತಯಾರಿಸುವ ಘಟಕಗಳು ಹೆಚ್ಚು ಜವಾಬ್ದಾರಿಯನ್ನು ವಹಿಸಿಕೊಂಡು, ಅತ್ಯುನ್ನತ ಗುಣಮಟ್ಟದ ಔಷಧಿಗಳು ಲಭ್ಯವಾಗುವಂತೆ ಮಾಡುವ ಕೆಲಸವನ್ನು ಅವರು ಮಾಡಬೇಕಾಗಿದೆ. ಇಂದು ಔಷಧಶಾಸ್ತ್ರದಲ್ಲಿ ತರಬೇತಿ ಹೊಂದಿದ ತಂತ್ರಜ್ಞರ ಅವಶ್ಯಕತೆ ಹೆಚ್ಚಿದೆ. ಡಿ.ಫಾರ್ಮ, ಬಿ.ಫಾರ್ಮ, ಎಂ.ಫಾರ್ಮಗಳನ್ನು ಪಡೆದವರಿಗೆ ಹೆಚ್ಚಿನ ಉದ್ಯೋಗಾವಕಾಶಗಳಿವೆ" ಎಂದರು. ಕಾರ್ಯಕ್ರಮದಲ್ಲಿ ಡಾ.ಬಿ.ಗೋಪಾಲಕೃಷ್ಣರವರು ವಿದ್ಯಾರ್ಥಿಗಳಿಗೆ ಪ್ರತಿಜ್ಞಾ ವಿಧಿಯನ್ನು ಬೋಧಿಸಿದರು.

# ನಮ್ಮ ಪುರಾಣ ಕಥೆಗಳಲ್ಲಿ ಮಾನವನ ಹೊಸತನದ ಆವಿಷ್ಕಾರದ ಮೂಲ

**ಅರ್ಚನೆ**

ಜಯಚಂದ್ರ ಆರಾಧ್ಯ
ಸಿಲಿಕಾನ್ ಮೈಕ್ರೋ ಸಿಸ್ಟಮ್ಸ್

ತಂತ್ರಜ್ಞಾನದ ಪ್ರಗತಿಯಿಂದ ನಡೆಯುತ್ತಿರುವ ಈ ಜಗತ್ತಿನಲ್ಲಿ, ನಾವು ಸಾಮಾನ್ಯವಾಗಿ ವೈಜ್ಞಾನಿಕ ಕಥೆಗಳಿಂದ ಹೊಸ ಆವಿಷ್ಕಾರಗಳು ಮತ್ತು ಆವಿಷ್ಕಾರಗಳಿಗೆ ಸ್ಫೂರ್ತಿಯನ್ನು ಹುಡುಕುತ್ತೇವೆ. ಆದಾಗ್ಯೂ, ಅಪಾರ ಸಾಮರ್ಥ್ಯವನ್ನು ಹೊಂದಿರುವ ಮತ್ತೊಂದು ಮೂಲವಿದೆ – ಪುರಾಣ. ಬಹಳ ಹಿಂದಿನಿಂದಲೂ ಪೌರಾಣಿಕ ಕಥೆಗಳು ಮತ್ತು ಜಾನಪದ ಪ್ರಕಾರಗಳಲ್ಲಿ ದೊರಕುವ ನಿರ್ದಿಷ್ಟ ತಂತ್ರಜ್ಞಾನಗಳನ್ನು ಮೀರಿದ ನವೀನ ಕಲ್ಪನೆಗಳು ನಮ್ಮ ಚಿಂತನೆಗಳಿಗೆ ವೇಗವರ್ಧಕವಾಗಿವೆ. ನಾವು ಪರಿಹರಿಸಲು ಬಯಸುವ ಸಮಸ್ಯೆಗಳಿಗೆ ಪರಿಹಾರರೂಪವಾಗಿ ಅವು ಮಾನವನ ಕಲ್ಪನೆಗೆ ಚಲನೆ ನೀಡುವ ಸಂಗತಿಗಳು ಮತ್ತು ಇಚ್ಚಾಶಕ್ತಿಗಳ ಕುರಿತಾದಂತೆ ಹಲವು ಸೂತ್ರಗಳನ್ನು ಒದಗಿಸುತ್ತವೆ.

ಶಾಶ್ವತ ಪರಿಹಾರಗಳನ್ನು ನೀಡುವ ವೈಜ್ಞಾನಿಕ ಕಥೆಗಿಂತ ಭಿನ್ನವಾಗಿ, ಪುರಾಣವು ಮಾನವೀಯತೆಯ ನೈತಿಕತೆ, ಮೂಲಭೂತ ಅಗತ್ಯಗಳು ಮತ್ತು ಆಸೆಗಳನ್ನು ಪರಿಶೀಲಿಸಿ ಪರಿಹಾರವನ್ನು ಕೊಡುತ್ತದೆ. ಜಲಾಂತರ್ಗಾಮಿ ನೌಕೆಗಳ ಉದಾಹರಣೆಯನ್ನು ತೆಗೆದುಕೊಳ್ಳಿ. ಜ್ಯೂಲ್ಸ್ ವರ್ನ್ ಅವರು ಜಲಾಂತರ್ಗಾಮಿ ನೌಕೆಯ ಪರಿಕಲ್ಪನೆಯನ್ನು ಅದರ ನಿಜವಾದ ನಿರ್ಮಾಣಕ್ಕಿಂತ ಮೊದಲು ವಿವರಿಸಿದರು. ಆದಾಗ್ಯೂ, ವೆರ್ನ್ ಅವರ ಈ ಪ್ರಬಂಧ ಸೃಷ್ಟಿಗಿಂತ ಬಹಳಷ್ಟು ಹಿಂದೆಯೇ ನಮ್ಮ ಪುರಾಣಗಳಲ್ಲಿ ನೀರೊಳಗಿನದನ್ನು ಅನ್ವೇಷಿಸುವ ಮತ್ತು ನೀರಿನಲ್ಲಿ ಮುಕ್ತವಾಗಿ ಪ್ರಯಾಣಿಸುವ ಬಯಕೆ ಇದ್ದುದು ತಿಳಿಯುತ್ತದೆ. ಪುರಾಣವು ಸಮಸ್ಯೆಯನ್ನು ರೂಪಿಸುತ್ತದೆ, ಆದರೆ ವೈಜ್ಞಾನಿಕ ಪ್ರಬಂಧವು ಇದಕ್ಕೆ ಪರಿಹಾರವನ್ನು ನೀಡುತ್ತದೆ.

ನಮ್ಮ ರಾಮಾಯಣ, ಮಹಾಭಾರತದ ಕಥೆಗಳಲ್ಲಿ ಬರುವ ಪುಷ್ಪಕ ವಿಮಾನ, ಮಾಯಾದರ್ಪಣ, ಬ್ರಹ್ಮಾಸ್ತ್ರ, ವಾಯು–ಅಗ್ನಿ ಅಸ್ತ್ರಗಳು, 100 ಮಕ್ಕಳ ಜನನ, ಮಾಯಾನಗರಿ, ಮಾಯಾಮಹಲ್, ದಿವ್ಯದೃಷ್ಟಿ (ದೂರದಲ್ಲಿ ನಡೆಯುವ ಘಟನೆಗಳನ್ನು ಕುಳಿತಲ್ಲೇ ನೋಡುವ ಶಕ್ತಿ) ಇತ್ಯಾದಿ, ಇವೆಲ್ಲವೂ ಈಗಿನ ಕಾಲದ ವೈಜ್ಞಾನಿಕ ಅವಿಷ್ಕಾರಗಳಲ್ಲಿ ಬಹಳ ಮುಖ್ಯ ಪಾತ್ರವನ್ನು ವಹಿಸಿವೆ. ಪ್ರತಿಯೊಬ್ಬ ವಿಜ್ಞಾನಿ ಕೂಡ ನಮ್ಮ ಪುರಾತನ ಕಾಲದ ಕಥೆಗಳನ್ನು ಸ್ವಲ್ಪ ಸರಿಯಾಗಿ ತಿಳಿದುಕೊಂಡರೆ, ಅಲ್ಲಿರುವ´ ಕಲ್ಪನೆಗೆ ರೂಪು ಕೊಟ್ಟರೆ, ಅದು ಈ ಕಾಲದ ಒಂದು ಹೊಸ ಆವಿಷ್ಕಾರವಾಗಿ ಮಾರ್ಪಾಡಾಗುತ್ತದೆ.

ಪೌರಾಣಿಕ ಕಥೆಗಳು ನಿರ್ದಿಷ್ಟ ತಂತ್ರಜ್ಞಾನಗಳಿಗೆ ಬದ್ಧವಾಗಿರದ ಪರಿಕಲ್ಪನೆಗಳನ್ನು ನೀಡುತ್ತವೆ. ಅವು ಮಾನವ ಕಲ್ಪನೆಯ ಮಿತಿಗಳನ್ನು ಮೀರಿ ಕಾಣಿಸಿಕೊಳ್ಳುತ್ತವೆ. ಆಧುನಿಕ ಸೆಲ್ ಫೋನ್ ಅನ್ನು ಟೆಲಿಪತಿ ಸಾಧನವಾಗಿ ಹೇಗೆ ವೀಕ್ಷಿಸಬಹುದು ಎಂಬುದನ್ನು ಪರಿಗಣಿಸಿ, ಅನಂತ ದೂರದಲ್ಲಿ ವ್ಯಕ್ತಿಗಳನ್ನು ಸಂಪರ್ಕಿಸಬಹುದು. ಈ ಪರಿಕಲ್ಪನೆಗಳು ಯಾವುದೇ ನಿರ್ದಿಷ್ಟ ತಂತ್ರಜ್ಞಾನದಿಂದ ಸ್ವತಂತ್ರವಾಗಿರುತ್ತವೆ ಮತ್ತು ವಿವಿಧ ವಿನ್ಯಾಸದ ವಿಶೇಷಣಗಳಿಗೆ ಅವುಗಳನ್ನು ಅನ್ವಯಿಸಬಹುದು.

ವೈಜ್ಞಾನಿಕ ಕಾಲ್ಪನಿಕತೆಯು ಸಾಮಾನ್ಯವಾಗಿ ವೈಜ್ಞಾನಿಕ ಸಮರ್ಥನೀಯತೆಯಿಂದ ನಿರ್ಬಂಧಿಸಲ್ಪಟ್ಟಿದೆ ಹಾಗೂ ಅದನ್ನು ಸಾಬೀತುಪಡಿಸಬೇಕಾಗುತ್ತದೆ. ಅಂತಹ ವೈಜ್ಞಾನಿಕ ಪ್ರಬಂಧದ ಲೇಖಕರು ತಮ್ಮ ಸಮಯದ ತಾಂತ್ರಿಕ ಸಾಧ್ಯತೆಗಳೊಂದಿಗೆ ಹೊಂದಿಕೆಯಾಗುವ ಭವಿಷ್ಯದ ದೃಷ್ಟಿಕೋನಗಳನ್ನು ರಚಿಸಲು ಪ್ರಯತ್ನಿಸಿದ್ದಾರೆ



ಹಾಗೂ ಹೊಸ ಹೊಸ ತಂತ್ರಜ್ಞಾನದ ಮೂಲಕ ತಮ್ಮ ಕಾಲ್ಪನಿಕತೆಯನ್ನು ಆಧರಿಸಿ ಇಂದಿನ ವಸ್ತುಗಳನ್ನು ಆವಿಷ್ಕರಿಸಿದ್ದಾರೆ. ಈ ಮಿತಿಯು ಕಾಲ್ಪನಿಕ ಪರಿಕಲ್ಪನೆಗಳ ಪರಿಶೋಧನೆಗೆ ಅಡ್ಡಿಯಾಗಬಹುದು. ಹಿಂದಿನ ತಾಂತ್ರಿಕ ಪ್ರವೃತ್ತಿಗಳಲ್ಲಿ ಬೇರೂರಿರುವ ಭವಿಷ್ಯವಾಣಿಗಳು ಯಾವಾಗಲೂ ಕಾರ್ಯರೂಪಕ್ಕೆ ಬರುವುದಿಲ್ಲ ಎಂದು ಇತಿಹಾಸವು ನಮಗೆ ತೋರಿಸಿದೆ. ಆದರೆ ಅದನ್ನೇ ತಮ್ಮ ವೇದಿಕೆ ಮತ್ತು ವೈಜ್ಞಾನಿಕ ಆವಿಷ್ಕಾರದ ಪ್ರಬಂಧಗಳ ಮೂಲಕ ತಿಳಿಸಲು ಪ್ರಯತ್ನಿಸಿದ್ದಾರೆ. ಹಾಗೆ ಪುರಾಣದ ಮಿತಿಯಿಲ್ಲದ ಸಾಮರ್ಥ್ಯದ ನಡುವಿನ ವ್ಯತ್ಯಾಸವನ್ನು ಗುರುತಿಸುವುದು ಅತ್ಯಗತ್ಯ.

ಪುರಾಣವು ಭವಿಷ್ಯದ ಆವಿಷ್ಕಾರಗಳಿಗೆ ಸ್ಫೂರ್ತಿಯ ಸಂಪತ್ತಾಗಿದೆ. ಫ್ಯಾಂಟಸಿ ಮತ್ತು ಪುರಾಣದ ಕೃತಿಗಳನ್ನು ಅನ್ವೇಷಿಸುವ ಮೂಲಕ, ಸಾವಿರಾರು ವರ್ಗಗಳಿಂದ ಸಂಸ್ಕರಿಸಿದ ಮಾನವಕುಲದ ಸಾಮೂಹಿಕ ಕಲ್ಪನೆಯನ್ನು ನಾವು ಸ್ಪರ್ಶಿಸುತ್ತೇವೆ. ಪ್ರತಿಯೊಂದು ಪೌರಾಣಿಕ ರೂಪಕದಲ್ಲಿನ ಒಂದೊಂದು ಪದವೂ ಬಳಕೆಯ ಒಂದೊಂದು ಸಂಭಾವ್ಯ ನವೀನ ಕಲ್ಪನೆಯನ್ನು ಪ್ರತಿನಿಧಿಸುತ್ತದೆ, ಅಗತ್ಯಗಳನ್ನು ರೂಪಿಸುತ್ತದೆ ಮತ್ತು ನಮ್ಮ ಸಮಯಕ್ಕೆ ಪರೀಕ್ಷೆಯನ್ನು ಒಡ್ಡುತ್ತದೆ. ಹಾರುವ ಕಾರ್ಪೆಟ್‌ಗಳಿಂದ ಹಿಡಿದು ಪೌರಾಣಿಕ ಯುದ್ಧ ಸಾಧನಗಳವರೆಗೆ, ಪ್ರಾಚೀನ ಕಥೆಗಳು ಇಂದು ನಾವು ಪರಿಹರಿಸಲು ಬಯಸುವ ಸಮಸ್ಯೆಗಳ ಒಳನೋಟಗಳನ್ನು ನಮಗೆ ನೀಡಿವೆ.

ನಾವು ಆಧುನಿಕತೆಯ ಕ್ಷೇತ್ರದಲ್ಲಿ ಹೊಸದನ್ನು ಹುಡುಕುತ್ತಿರುವಾಗ ಮತ್ತು ಮಾಡುವಾಗ, ಪುರಾಣಗಳಲ್ಲಿ ಕಂಡುಬರುವ ಬುದ್ಧಿವಂತಿಕೆ ಮತ್ತು ಸೃಜನಶೀಲತೆಯ ಸಂಪತ್ತನ್ನು ಕಡೆಗಣಿಸಬಾರದು. ಈ ಕಾಲಾತೀತ ಕಥೆಗಳಲ್ಲಿ ವ್ಯಕ್ತಪಡಿಸಿದ ಆಧಾರವಾಗಿರುವ (ಆಧಾರವಿಲ್ಲದ) ಅಗತ್ಯಗಳು ಮತ್ತು ಆಸೆಗಳನ್ನು ಅರ್ಥಮಾಡಿಕೊಳ್ಳುವ ಮೂಲಕ, ನಾವು ಬಳಸದ, ಬಳಸಲಾಗದ ಅಸಾಮರ್ಥ್ಯದ ಜಗತ್ತನ್ನು ತೆರೆಯಬಹುದು. ಪುರಾಣಗಳು ಪ್ರಸ್ತುತಪಡಿಸಿದ ಸಮಸ್ಯೆಗಳ ಭಂಡಾರದಿಂದ ಸೂತ್ರೀಕರಣವನ್ನು ಅಳವಡಿಸಿಕೊಳ್ಳೋಣ ಮತ್ತು ಅಸ್ತಿತ್ವದಲ್ಲಿರುವ ತಂತ್ರಜ್ಞಾನದಿಂದ ಅನಿಯಂತ್ರಿತ ಭವಿಷ್ಯವನ್ನು ನಿಯಂತ್ರಿತ ಭವಿಷ್ಯವನ್ನಾಗಿ ರೂಪಿಸಲು ಅದರ ಶಕ್ತಿಯನ್ನು ಬಳಸಿಕೊಳ್ಳೋಣ. ಹಾಗೆ ಮಾಡುವುದರಿಂದ, ನಾವು ಅದ್ಭುತ ಪರಿಹಾರಗಳನ್ನು ಕಂಡುಕೊಳ್ಳಬಹುದು ಮತ್ತು ನಮ್ಮ ಸುತ್ತಲಿನ ಪ್ರಪಂಚವನ್ನು ಪರಿವರ್ತಿಸಬಹುದು.

# ನಯೋನಿಕಾ ಐ ಕೇರ್ ಚಾರಿಟೆಬಲ್ ಟ್ರಸ್ಟ್‌ಯಿಂದ ಶ್ರೀದೇವಿ ಆಸ್ಪತ್ರೆಗೆ "ಫೋಲ್ಡಬಲ್ ಇಂಟ್ರಾಕ್ಯೂಲರ್ ಲೆನ್ಸ್" ಕೊಡುಗೆ

"ದೃಷ್ಟಿವಿಲ್ಲದ ಮಗುವಿಗೆ 'ಕತ್ತಲೆಯ ಜಗತ್ತನ್ನು ಅಳಿಸಿ ಅದರ ಬದುಕನ್ನು ಬೆಳಗಿಸುವುದಕ್ಕೆ' ಈ ಇಂಟ್ರಾಕ್ಯೂಲರ್ ಲೆನ್ಸ್ ಸಹಾಯಕವಾಗುತ್ತದೆ. ಕಣ್ಣಿನ ಆರೈಕೆ ಮತ್ತು ಪೊರೆ ಸೇವೆಗಳನ್ನು ಒದಗಿಸಲು ಹೆಚ್ಚು ಅಗತ್ಯವಿರುವ, ಸಹಾನುಭೂತಿಯಿಂದ ಅದನ್ನು ಗುಣಪಡಿಸಲು ಸಹಾಯವಾಗುವಂತೆ 'ನಯೋನಿಕಾ ಐ ಕೇರ್ ಚಾರಿಟೆಬಲ್ ಟ್ರಸ್ಟ್' ಇಂತಹ ಕೊಡುಗೆ ಕೊಟ್ಟಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ಪುಟ್ಟಮಕ್ಕಳು ಕಣ್ಣಿನ ದೃಷ್ಟಿದೋಷದಿಂದ ಅಂಧರಾಗಿದ್ದರೆ, ಅವರಿಗೆ ದೃಷ್ಟಿ ಕೊಡಲು ಸಹಾಯವಾಗುತ್ತದೆ. ಬೆಂಗಳೂರಿನ ನಯೋನಿಕಾ ಐ ಕೇರ್ ಚಾರಿಟೆಬಲ್ ಟ್ರಸ್ಟ್‌ನವರು ಕೋವಿಡ್‌ನ ಸಮಯದಲ್ಲಿ ಉತ್ತಮ ರೀತಿಯಲ್ಲಿ ಸೇವೆ ಸಲ್ಲಿಸಿದ್ದಾರೆ. ಅವರು ಎರಡು ಜಿಲ್ಲೆಗಳಲ್ಲಿ ಅಂಧಮಕ್ಕಳನ್ನು ಗುರುತಿಸಿ ಅವರ ಶಸ್ತ್ರಚಿಕಿತ್ಸೆಗೆ ಶ್ರೀದೇವಿ ಆಸ್ಪತ್ರೆಯನ್ನು ಆಯ್ಕೆ ಮಾಡಿಕೊಂಡಿರುವುದು ಸಂತಸದ ವಿಚಾರ" ಎಂದು ಬೆಂಗಳೂರಿನ ನಯೋನಿಕಾ ಐ ಕೇರ್ ಚಾರಿಟೆಬಲ್ ಟ್ರಸ್ಟ್‌ನವರು ಇಂಟ್ರಾಕ್ಯೂಲರ್ ಲೆನ್ಸ್‌ಗಳನ್ನು ಶ್ರೀದೇವಿ ಆಸ್ಪತ್ರೆಗೆ ಕೊಡುಗೆಯಾಗಿ ನೀಡುವ ಸಮಾರಂಭ ಡಿ.29 ಜರುಗಿದ್ದು, ಅದರಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಶ್ರೀದೇವಿ ವೈದ್ಯಕೀಯ ನಿರ್ದೇಶಕರಾದ ಡಾ.ರಮಣ್ ಆರ್. ಹುಲಿನಾಯ್ಕರ್ ಅವರು ತಿಳಿಸಿದರು. ಶ್ರೀದೇವಿ ಆಸ್ಪತ್ರೆಗೆ ನಯೋನಿಕಾ ಐ ಕೇರ್ ಸಂಸ್ಥೆಯವರು 200 ಲೆನ್ಸ್‌ಗಳನ್ನು ಉಚಿತವಾಗಿ ನೀಡಿದರು.

ಇದೇ ಸಂದರ್ಭದಲ್ಲಿ ಶ್ರೀದೇವಿ ಆಸ್ಪತ್ರೆಯ ನೇತ್ರತಜ್ಞ ವಿಭಾಗದ ಪ್ರಾಧ್ಯಾಪಕರಾದ ಡಾ.ಲಾವಣ್ಯ ಅವರು "ಚಿಕ್ಕ ಮಕ್ಕಳಿಗೆ ಪೊರೆಗಳ ಸ್ಕ್ರೀನಿಂಗ್ ಮಾಡಲಾಗುತ್ತದೆ. ತುಮಕೂರು ಜಿಲ್ಲೆಯೊಂದರಲ್ಲಿ ಶೇ.15 ರಷ್ಟು ಮಕ್ಕಳಲ್ಲಿ ದೃಷ್ಟಿದೋಷವಿದ್ದು



ಅದರಿಂದ ಅವರನ್ನು ಮುಕ್ತಗೊಳಿಸಲಾಗುವುದು. ಮೊದಲು ಚಿಕ್ಕಮಕ್ಕಳಲ್ಲಿ ನಂತರ ಶಾಲೆಗಳಲ್ಲಿ ಸ್ಕ್ರೀನಿಂಗ್ ಟೆಸ್ಟ್ ಮಾಡಿ ಗುಣಮಟ್ಟದ ಇಂಟ್ರಾಕ್ಯೂಲರ್ ಲೆನ್ಸ್ ಒದಗಿಸಲಾಗುವುದು. ಮಕ್ಕಳಿಗೆ ಕಣ್ಣಿನ ಆರೈಕೆಯ ಸೇವೆಯನ್ನು ಉಚಿತವಾಗಿ ಒದಗಿಸಲಾಗುತ್ತದೆ. ನಯೋನಿಕ್ ಐ ಕೇರ್ ಸಂಸ್ಥೆ ಗ್ರಾಮೀಣ ಭಾರತದ ಮೂಲೆ ಮೂಲೆಗಳಲ್ಲಿ ಕಣ್ಣಿನ ಆರೈಕೆಗೆ ಉತ್ತಮ ಸೇವೆ ಒದಗಿಸುತ್ತದೆ. ಕಣ್ಣಿನ ಆರೋಗ್ಯವನ್ನು ಸುಧಾರಿಸುವ ದಿಸೆಯಲ್ಲಿ ತುಮಕೂರು, ಚಿತ್ರದುರ್ಗ ಜಿಲ್ಲೆಯಲ್ಲಿನ ಮಕ್ಕಳಿಗೆ ನೇತ್ರ ಶಸ್ತ್ರಚಿಕಿತ್ಸೆ ಮಾಡಲು ಅವರು ಶ್ರಮಿಸುತ್ತಿದ್ದಾರೆ. ಅದಕ್ಕಾಗಿ ಅವರನ್ನು ಅಭಿನಂದಿಸಬೇಕು" ಎಂದರು.

ಡಾ.ಸಂದೀಪ್ ಶೆಣೈ ಮಾತನಾಡುತ್ತಾ "ಕರ್ನಾಟಕ ಮತ್ತು ಪುಣೆ ಮೊದಲಾದ ಕಡೆ ಸುಮಾರು 38 ಸರ್ಕಾರಿ ಆಸ್ಪತ್ರೆಗಳಿಗೆ ಕೋವಿಡ್‌ಬೆಡ್, ಐಸಿಯು, ಲಸಿಕೆ, ಆಕ್ಸಿಜನ್ ಹಾಗೂ ಇತರೆ ಉಪಕರಣಗಳು ನೀಡಿದ್ದೇವೆ. ನೇತ್ರ ಆರೋಗ್ಯ ಕಾರ್ಯಕ್ರಮವನ್ನು ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಸಿದ್ಧತೆ ಮಾಡಿಕೊಂಡಿದ್ದೇವೆ. ಉಚಿತ ನೇತ್ರ ತಪಾಸಣೆ, ಕನ್ನಡಕ ವಿತರಣೆ ಮತ್ತು ಉಚಿತ ಶಸ್ತ್ರಚಿಕಿತ್ಸೆಗಳನ್ನು 'ನಯೋನಿಕಾ ಐ ಕೇರ್ ಚಾರಿಟೆಬಲ್ ಟ್ರಸ್ಟ್‌ನ' ವತಿಯಿಂದ ನಡೆಸಲಾಗುವುದು" ಎಂದರು.

ಶ್ರೀಪ್ರಶಾಂತ್ ಎಸ್.ಬಿ. ಅವರು ಮಾತನಾಡುತ್ತಾ "ಸೆಂಟ್ರಲ್ ಮಿಚಿಗನ್ ಯೂನಿವರ್ಸಿಟಿಯಲ್ಲಿ ಸುಮಾರು ಇಪ್ಪತ್ತು ಸಾವಿರಕ್ಕೂ ಹೆಚ್ಚಿನ ಕಣ್ಣಿನ ಪೊರೆಯ ಶಸ್ತ್ರಚಿಕಿತ್ಸೆಗಳನ್ನು ನಡೆಸಲಾಗಿದೆ. 2012ರಲ್ಲಿ ನಯೋನಿಕಾ ಐ ಕೇರ್ ಚಾರಿಟಬಲ್‌ಟ್ರಸ್ಟ್‌ನ್ನು ಸ್ಥಾಪಿಸಲಾಯಿತು. ಹತ್ತುವರ್ಷದಲ್ಲಿ ನಲವತ್ನಾಲ್ಕು ಸಾವಿರ ಉಚಿತವಾಗಿ ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆ, ಒಂದು ಲಕ್ಷ ಇಪ್ಪತ್ತ ಮೂರು ಸಾವಿರ ಕನ್ನಡಕಗಳ ವಿತರಣೆ ಮತ್ತು ಒಂಬತ್ತು ಡಯಾಬೀಟಿಕ್ ರೆಟಿನೋಪತಿ ಸ್ಕ್ರೀನಿಂಗ್ ಮಾಡಲಾಗಿದೆ. ಇಪ್ಪತ್ತೈದು ಲಕ್ಷಕ್ಕೂ ಹೆಚ್ಚಿನ ಜನರಿಗೆ ಉಚಿತ ನೇತ್ರ ತಪಾಸಣೆ ಮಾಡಿದ್ದೇವೆ. ನಮ್ಮ ಏಳು 'ನವೀನ ಕಣ್ಣಿನ ಆರೋಗ್ಯ ಯೋಜನೆಗಳು' ಗ್ರಾಮೀಣ ಜನರಿಗೆ ಅತ್ಯಂತ ಉಪಯುಕ್ತವಾಗಿದೆ" ಎಂದು ನಯೋನಿಕಾ ಟ್ರಸ್ಟ್‌ನ ಸಾಧನೆಯನ್ನು ವಿವರಿಸಿದರು.

'ಶ್ರೀದೇವಿ ವೈದ್ಯಕೀಯ ಆಸ್ಪತ್ರೆಯ ಎಲ್ಲ ರೀತಿಯ ವೈದ್ಯಕೀಯ ಉಪಕರಣಗಳನ್ನು ಹೊಂದಿದೆ. ಬೆಂಗಳೂರಿನ ನಯೋನಿಕಾ ಐ ಕೇರ್ ಚಾರಿಟೆಬಲ್ ಟ್ರಸ್ಟ್‌ರವರು ಉಚಿತವಾಗಿ ಇಂಟ್ರಾಕ್ಯೂಲರ್ ಲೆನ್ಸ್ ನೀಡುತ್ತಿರುವುದು ನಿಜಕ್ಕೂ ಶ್ಲಾಘನೀಯವಾದ ಕೆಲಸ' ಎಂದು ಶ್ರೀದೇವಿ ವಿದ್ಯಾಸಂಸ್ಥೆಯ ಅಧ್ಯಕ್ಷರಾದ ಡಾ.ಎಂ.ಆರ್. ಹುಲಿನಾಯ್ಕರ್ ಅವರು ತಮ್ಮ ಸಂದೇಶದಲ್ಲಿ ತಿಳಿಸಿದ್ದರು. ಇದೇ ಸಂದರ್ಭದಲ್ಲಿ ನಯೋನಿಕಾ ಐ ಕೇರ್ ಚಾರಿಟೆಬಲ್ ಟ್ರಸ್ಟ್‌ನ ಕಣ್ಣಿನ ಆರೋಗ್ಯ ಶಸ್ತ್ರಚಿಕಿತ್ಸಕರಾದ ಡಾ.ಸುರೇಖಾ, ಶ್ರೀದೇವಿ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರಾದ ಡಾ.ಕೆ. ಮೋಹನ್‌ಕುಮಾರ್, ಶ್ರೀದೇವಿ ಆಸ್ಪತ್ರೆಯ ನೇತ್ರತಜ್ಞರಾದ ಡಾ.ರವಿಪ್ರಕಾಶ್, ಡಾ.ಕಲ್ಲೇಶ್, ಶ್ರೀದೇವಿ ಆಸ್ಪತ್ರೆಯ ಸಿ.ಇ.ಓ ಪ್ರದೀಪ್, ಮುಂತಾದವರು ಉಪಸ್ಥಿತರಿದ್ದರು.

■ ವರದಿ: ಎನ್.ಆನಂದ

Printed and Published by **Shridevi Media Center,** Lingapura, NH 4, Sira Road, Tumakuru - 572106, Mob: 94480 82844 and
Printed at **Maruthi Printing Press,** No.90/6-1. 1st cross, Vittal Nagar West, Near Marvel Apartment, Bengaluru-560026. Editor in Chief: **Dr M R Hulinaykar**